ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
★ ಪ್ರೀತಿ ನಮ್ಮ ಸ್ವಭಾವ.
★ ಮೌನ ನಮ್ಮ ಭಾಷೆ.
★ ಧ್ಯಾನ ನಮ್ಮ ಮಾರ್ಗ.
★ ಈ ಪ್ರಪಂಚ ನಮ್ಮ ಆಶ್ರಮ.
★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

# ತಪೋವಾಣಿ

ಸಂಪುಟ 16 ಸಂಚಿಕೆ 3 ಮಾರ್ಚ್ 2019 ರೂ.25

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**

**ಅನು: ಚಂಪಾ**

(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು – ಜೂನ್ 2002ರ ಸಂಚಿಕೆ)

ಸಂಜೆಯ ಹೊತ್ತಿನಲ್ಲಿ ತಣ್ಣನೆಯ ಗಾಳಿ ಬೀಸುತ್ತದೆ. ರಾತ್ರಿಯಲ್ಲಿ ತುಂತುರು ಮಳೆಯೂ. ಬೇಸಿಗೆ ಸ್ವಲ್ಪ ಸಮಯದಲ್ಲೇ ಮುಗಿದುಹೋಗುತ್ತದೆ. ಸುಡುತ್ತಿರುವ ಅನುಭವ ನಿಂತುಹೋಗುತ್ತದೆ.

ಎಲ್ಲೆಡೆ ಇಷ್ಟೊಂದು ನೋವು ಮತ್ತು ಬಾಧೆಗಳಿರುವಾಗ, ಇಷ್ಟೊಂದು ಹಿಂಸೆ ಮತ್ತು ದ್ವೇಷವಿರುವಾಗ ಒಬ್ಬ ಅನುಭಾವಿ, ಒಬ್ಬ ಮಾಸ್ಟರ್ ಅಥವಾ ಒಬ್ಬ ಧ್ಯಾನಿ ಏನು ಮಾಡಿಯಾನು? ಅವನು ತನಗೆ ಸಾಧ್ಯವಾದುದನ್ನು ಮಾಡುತ್ತಾನೆ, ಅಂದರೆ ನೆಮ್ಮದಿ ಮತ್ತು ಶಾಂತಿಯನ್ನು ತರಲು ಸೂಕ್ಷ್ಮಮಟ್ಟದಲ್ಲಿ ಕೆಲಸ ಮಾಡುತ್ತಾನೆ. ಆದಾಗ್ಯೂ ಕೊಲೆಗಳು ಮತ್ತು ಕಷ್ಟಗಳು ಏಕೆ ಹೆಚ್ಚುತ್ತಲೇ ಇವೆ?

ಇದು ಒಳ್ಳೆಯ ಪ್ರಶ್ನೆ. ಆದರೆ ಇದಕ್ಕೆ ತಾರ್ಕಿಕವಾಗಿ ಉತ್ತರ ಕೊಡುವುದು ಸುಲಭವಲ್ಲ. ಇನ್ನೂ ಹೆಚ್ಚಿನ ಕಷ್ಟಕೋಟಲೆಗಳನ್ನು ತಪ್ಪಿಸಲಾಗಿದೆ, ಯುದ್ಧಗಳನ್ನು ತಡೆಹಿಡಿಯಲಾಗಿದೆ ಹಾಗೂ ಅಣುಬಾಂಬುಗಳಿಂದ ಆಗಬಹುದಾಗಿದ್ದ ಸರ್ವನಾಶದಿಂದ ಜಗತ್ತನ್ನು ಹಲವಾರು ಬಾರಿ ಉಳಿಸಲಾಗಿದೆ, ಸೂಕ್ಷ್ಮಮಟ್ಟದಲ್ಲಿ ಕೆಲಸ ಮಾಡುತ್ತಿರುವವರಿಗೆ ಇದೆಲ್ಲದರ ಅರಿವಿದೆ.

ಅನೇಕರು ಸೂಕ್ಷ್ಮಮಟ್ಟದಲ್ಲಿ ಕೆಲಸ ಮಾಡುತ್ತಿದ್ದಾರೆ. ಆದರೆ ಅದರ ಲಾಭದಾಯಕ ಪರಿಣಾಮಗಳನ್ನು ಭೌತಿಕ ಮಟ್ಟಕ್ಕೆ ತರಲು ಮತ್ತು ಚಾನಲ್ ಮಾಡಲು ಸಾಕಷ್ಟು ಜನರಿಲ್ಲ. ಉತ್ತಮ ಧ್ಯಾನಿಗಳು ಅಷ್ಟೊಂದು ದೊಡ್ಡ ಸಂಖ್ಯೆಯಲ್ಲಿಲ್ಲ. ಅನೇಕರು ಧ್ಯಾನದ ತರಗತಿಗಳಿಗೆ ಸೇರಿಕೊಳ್ಳುತ್ತಿದ್ದಾರೇನೋ ನಿಜ. ಆದರೆ ಅವರ ಧ್ಯಾನಗಳು ಸಾಕಷ್ಟು ದೀರ್ಘ ಮತ್ತು ಆಳವಾಗಿಲ್ಲ. ಅವರು ಭೌತಿಕ ಮಟ್ಟದಲ್ಲಿ ತಮ್ಮ ಕೆಲಸ ಕಾರ್ಯಗಳನ್ನು ಮಾಡಿಕೊಳ್ಳಲು ಎಷ್ಟು ಬೇಕೋ ಅಷ್ಟು ಅಲ್ಪಕಾಲ ಲಘುವಾದ ಧ್ಯಾನ ಮಾಡುತ್ತಾರಷ್ಟೆ.

ನಾವು ಶ್ರದ್ಧಾವಂತ ಧ್ಯಾನಿಗಳಿಗಾಗಿ ಕಾಯುತ್ತಿದ್ದೇವೆ. ನಾವು ನಮ್ಮ ಧ್ಯಾನಿಗಳಿಗೆ ಭೌತಿಕ ಮಟ್ಟದ ಲಾಭಕ್ಕಾಗಿ ಮಾತ್ರವಲ್ಲದೆ ಶಾಂತಿ ಮತ್ತು ಪ್ರೇಮವನ್ನು ಚಾನಲ್ ಮಾಡಲು ತರಬೇತಿ ನೀಡುತ್ತಿದ್ದೇವೆ.

ಸೇವೆ ಮಾಡಬೇಕೆಂದಾದರೆ ಹಲವಾರು ಕೆಲಸಗಳನ್ನು ಒಪ್ಪಿಕೊಳ್ಳಬೇಕಾಗಿಲ್ಲವೆಂದು ಜನರನ್ನು ಮನದಟ್ಟು ಮಾಡಿಸುವುದು ಕಷ್ಟ. ಸೇವೆ ಮಾಡಲು ಮತ್ತು ಇತರರನ್ನು ಉಪಚರಿಸಲು ಬೇರೆಯವರೂ ಇದ್ದಾರೆ.

ನಮ್ಮ ಕೆಲಸ ಮುಖ್ಯವಾಗಿ ಧ್ಯಾನವನ್ನು ಕಲಿಸುವುದು ಮತ್ತು ಅದರಲ್ಲಿ ತರಬೇತಿ ನೀಡುವುದು. ಶಾಲೆಗಳನ್ನು ಮತ್ತು ವೃದ್ಧಾಶ್ರಮಗಳನ್ನು ನಡೆಸಬೇಕೆಂಬ ಬಯಕೆ ನಮಗಿಲ್ಲ ಎನ್ನುವುದೇ ಸಂತೋಷಕರ ವಿಷಯ. ಹಾಗಾಗಿದ್ದರೆ ನಾವು ನಮ್ಮ ಮುಖ್ಯ ಧ್ಯೇಯವನ್ನೇ ಮರೆತುಬಿಟ್ಟಿರುತ್ತಿದ್ದೆವು.

ನಮಗೆ ಧ್ಯಾನದಲ್ಲಿ ವಿಶೇಷ ಪರಿಣತಿ ಇದೆ. ಈ ಕ್ಷೇತ್ರದಲ್ಲಿ ನಾವು ಬಹಳಷ್ಟು ಜ್ಞಾನವನ್ನು ಕಲೆಹಾಕಿದ್ದೇವೆ; ಉನ್ನತ ಮಟ್ಟದ ತಂತ್ರಗಳನ್ನು ಅಭಿವೃದ್ಧಿಪಡಿಸಿದ್ದೇವೆ. ನಾವು ಒಳ್ಳೆಯ ಕಾರ್ಯವನ್ನು ಮಾಡುತ್ತಿದ್ದೇವೆಂಬ ಸಂತೋಷ ನಮಗಿದೆ.

ಪ್ರಯತ್ನವಿಲ್ಲದೆ ಏನನ್ನೂ ಸಾಧಿಸಲಾಗುವುದಿಲ್ಲ. ಧ್ಯಾನವಿಲ್ಲದೆ ನಾವು ಬೆಳೆಯುವುದಿಲ್ಲ. ಧ್ಯಾನವು ಋಷಿಗಳ ಕೊಡುಗೆ.■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560077. ಭಾರತ.
✆ 99000 75280 (ಬೆಳಗ್ಗೆ 10ರಿಂದ ಸಂಜೆ 5)
ಇ–ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ

ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ

ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ,
ಬನಶಂಕರಿ 2ನೇ ಹಂತ

### ಆನೇಕಲ್‌ನಲ್ಲಿ

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

**ಸಪ್ತರ್ಷಿ ಧ್ಯಾನ ಕೇಂದ್ರ, ರಾಜರಾಜೇಶ್ವರಿ ಬಡಾವಣೆ**

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ)**
**ಪ್ರಕಾಶ್‌ಮಾರ್ಗ್ (ಮರಾಠಿ)**
**ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/- ಡಿಡಿಯನ್ನು**
**'Manasa Light Age Foundation'**
**ಹೆಸರಿನಲ್ಲಿ ಕಳುಹಿಸಬೇಕು.**
**ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



**2019ರ ವಿಶ್ವ ಚಾನಲ್ಸ್ ದಿನದ ಯಶಸ್ಸನ್ನು ಲೈಟ್ ಚಾನಲ್ಸ್ ಕಾರ್ಯಕರ್ತರು ಆಚರಿಸಿದರು**

### ಸುದ್ದಿ-ಸೂಚನೆಗಳು

- ಮಹರ್ಷಿ ಅಮರರವರ 100ನೇ ಜನ್ಮೋತ್ಸವವನ್ನು 1-2-2019ರಂದು ಅನೇಕಲ್ಲಿನ ನಮ್ಮ ಸಪ್ತರ್ಷಿ ಧ್ಯಾನ ಕೇಂದ್ರದಲ್ಲಿ ಮತ್ತು 3-2-2019ರಂದು ತಪೋನಗರದಲ್ಲಿ ಆಚರಿಸಲಾಯಿತು.
- 3-2-2019 ರಂದು ತಪೋನಗರದಲ್ಲಿ ನಡೆದ ಕಾರ್ಯಕ್ರಮದ ಸಮಯದಲ್ಲಿ, "Thus Spoke Guruji Krishnananda – Vol 3" ಪುಸ್ತಕವನ್ನು ಬಿಡುಗಡೆ ಮಾಡಲಾಯಿತು ಮತ್ತು ಮಹರ್ಷಿ ಅಮರರವರ ಸಣ್ಣ ಬಸ್ಟ್ ವಿದ್ಯಾರ್ಥಿಗಳಿಗೆ ಲಭ್ಯವಿತ್ತು.
- ದಿನಾಂಕ 01-05-2019, ಬುಧವಾರದಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ರವರೆಗೆ ತಪೋನಗರದಲ್ಲಿ ಓರಿಯಂಟೇಶನ್ ತರಗತಿಯನ್ನು ನಡೆಸಲಾಗುವುದು. ವೆಬ್‌ಕಾಸ್ಟ್ ವ್ಯವಸ್ಥೆಯನ್ನು ಹೊಂದಿರುವ ದೂರಕಲಿಕೆಯ ಸಾಧಕರು ಕೂಡಾ ನೇರಪ್ರಸಾರದ ಮೂಲಕ ಇದರಲ್ಲಿ ಭಾಗವಹಿಸ ಬಹುದು. ಭಾಗವಹಿಸಲು ಇಷ್ಟಪಡುವವರು ದಿನಾಂಕ 29-04-2019ರ ಒಳಗೆ ಮಾನಸ ಆಫೀಸನ್ನು ಸಂಪರ್ಕಿಸಿ ತಮ್ಮ ಹೆಸರನ್ನು ನೊಂದಾಯಿಸಬೇಕಾಗಿ ವಿನಂತಿ.

### ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು : | ಉಪನ್ಯಾಸಗಳು : ಬೆಳಿಗ್ಗೆ 11-12<br>ಲೈಟ್‌ಚಾನಲಿಂಗ್: ಮಧ್ಯಾಹ್ನ12-1 |
| 04-3-2019 | ಮಹಾಶಿವರಾತ್ರಿ ವಿಶೇಷ ಧ್ಯಾನ: ಮಧ್ಯಾಹ್ನ 12-1 |
| 10-3-2019 | ಮಧ್ಯಾಹ್ನ 2ಕ್ಕೆ ಶಂಬಲ ಗ್ರೂಪ್ ಸಂಧಿಸುತ್ತದೆ |
| 17-3-2019 | ಮಧ್ಯಾಹ್ನ 2ಕ್ಕೆ ರಾ ಗ್ರೂಪ್ ಸಂಧಿಸುತ್ತದೆ |
| 31-3-2019 | ಅಖಂಡ ಧ್ಯಾನ (ಲೈಟ್‌ಚಾನಲಿಂಗ್): ಬೆಳಿಗ್ಗೆ 11ರಿಂದ ಮಧ್ಯಾಹ್ನ1 |

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 04 | ಸೋಮ | ಮಹಾ ಶಿವರಾತ್ರಿ |
| 06 | ಬುಧ | ಅಮಾವಾಸ್ಯೆ |
| 14 | ಗುರು | ಶುಕ್ಲ ಅಷ್ಟಮಿ |
| 16 | ಶನಿ | ಶುಕ್ಲ ದಶಮಿ |
| 20 | ಬುಧ | ಕಾಮದಹನ |
| 21 | ಗುರು | ಪೂರ್ಣಿಮಾ |
| 28 | ಗುರು | ಕೃಷ್ಣ ಅಷ್ಟಮಿ |

### ಮಹಾ ಶಿವರಾತ್ರಿ ತಂತ್ರ

ಮಹಾ ಶಿವರಾತ್ರಿಯಂದು ರಾತ್ರಿ, ಶಿವನ ಅಂಶವನ್ನು ಋಷಿಗಳು ಕೆಳತರುತ್ತಾರೆ, ಮಾರನೆಯ ದಿನ ಬೆಳಿಗ್ಗೆ ಬೆಳಕಿನ ಕಿರಣದ ರೂಪದಲ್ಲಿ ಅದು ಈ ಭೂಮಿಯ ಮೇಲಿರುವ ಪ್ರತಿಯೊಂದು ಮನೆಯನ್ನೂ ಪ್ರವೇಶಿಸುತ್ತದೆ. ಅವನ ಚೈತನ್ಯವು 10 ದಿನಗಳವರೆಗೆ ಇಲ್ಲಿರುತ್ತದೆ. ಈ 10 ದಿನಗಳು, ಅವನ ವಿಶೇಷ ಇರುವಿಕೆಯ ಅರಿವಿನಲ್ಲಿ ನಾವಿರಬಹುದು. ಶಿವನನ್ನು ಅನುಭವಿಸುವುದಕ್ಕಾಗಿ ಮತ್ತು ಅವನ ಚೈತನ್ಯವನ್ನು ಪಡೆಯುವುದಕ್ಕಾಗಿ ಈ ತಂತ್ರವನ್ನು ಮಹಾ ಶಿವರಾತ್ರಿಯಿಂದ ಮುಂದಿನ 10 ದಿನಗಳವರೆಗೆ ದಿನನಿತ್ಯದ ಧ್ಯಾನದ ಬದಲಿಗೆ ನಾವು ಅಭ್ಯಾಸ ಮಾಡಬಹುದು. ಒಂದು ದೊಡ್ಡ ನೀಲಿಬಣ್ಣದ ಶಿವಲಿಂಗವನ್ನು ನಿಮ್ಮೆದುರು ಊಹಿಸಿಕೊಳ್ಳಿ. ನೀವು ಒಂದು ಬೆಳಕಿನ ಕಣವಾಗಿ ಈ ಶಿವಲಿಂಗವನ್ನು ಪ್ರವೇಶ ಮಾಡಿದ ಹಾಗೆ ಊಹಿಸಿಕೊಳ್ಳಿ. ನೀಲಿ ಬೆಳಕನ್ನು ಅನುಭವಿಸಿ.

### ಕಾಮದಹನ ತಂತ್ರ

ಮಾರ್ಚ್20, ಬುಧವಾರ, ಚಂದ್ರೋದಯದ ಸಮಯ ದಲ್ಲಿ, ನಿಮ್ಮ ಮುಂದೆ ಒಂದು ಹೋಮ ಕುಂಡವಿದೆ ಎಂದು ಊಹಿಸಿಕೊಳ್ಳಿ. ಒಂದು ಬಾರಿ 'ಓಂ ಅಗ್ನಿದೇವಾಯ ನಮಃ' ಎಂಬ ಮಂತ್ರವನ್ನು ಹೇಳಿ ಅಗ್ನಿದೇವನನ್ನು ಆವಾಹಿಸಿ ಮತ್ತು ಹೋಮಕುಂಡದಲ್ಲಿ ಬೆಂಕಿಯನ್ನು ಊಹಿಸಿಕೊಳ್ಳಿ. ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳನ್ನು ಊಹಿಸಿಕೊಳ್ಳಿ. ಕಾಮವು ನಮ್ಮಿಂದ ಒಂದು ಹೊಗೆಭರಿತ ಅಥವಾ ಕಪ್ಪುಚೆಂಡಿನ ರೂಪದಲ್ಲಿ ಹೊರಬರುತ್ತಿದೆ ಎಂದು ಒಂದು ಅಥವಾ ಎರಡು ನಿಮಿಷಗಳ ಕಾಲ ಭಾವಿಸಿಕೊಳ್ಳಿ, ಅದನ್ನು ನಿಮ್ಮ ಕೈಗಳಲ್ಲಿ ಸಂಗ್ರಹಿಸಿ ಹೋಮಾಗ್ನಿಯಲ್ಲಿ ಹಾಕಿ. ಅದು ಸಂಪೂರ್ಣವಾಗಿ ಭಸ್ಮವಾಗುತ್ತದೆ. ಇದೇರೀತಿಯಾಗಿ ಉಳಿದ ಐದನ್ನೂ ಪುನರಾವರ್ತಿಸಿ. ನಂತರ ಅಗ್ನಿದೇವನಿಗೆ ಕೃತಜ್ಞತೆಯನ್ನು ಸಲ್ಲಿಸಿ. ನಂತರ ಸ್ವಲ್ಪ ಸಮಯದವರೆಗೆ ನಿಮ್ಮಲ್ಲಿ ಬೆಳಕನ್ನು ಅನುಭವಿಸಿ.

# 9ನೇ ವಿಶ್ವ ಚಾನಲ್ಸ್ ದಿನದ ವರದಿ

ಮನೋಜ್ ಕುಮಾರ್ ಚೋಪ್ರ; ಅನು: ಪಾಂಡುರಂಗ

ಭೂಮಿಯ ಮೇಲೆ ಪ್ರೀತಿ ಮತ್ತು ಶಾಂತಿಯನ್ನು ಹರಡುವ ದಿನವೇ ಈ ವಿಶ್ವ ಚಾನಲ್ಸ್ ದಿನ. ನಮ್ಮ ಈ ಭೂಮಿಯ ಮೇಲೆ ಹೊಸ ಯುಗವನ್ನು ಸ್ಥಾಪಿಸುವುದು ನಮ್ಮ ಮಹರ್ಷಿ ಅಮರರವರ ಕನಸಾಗಿತ್ತು. ಪ್ರತಿ ವಿಶ್ವ ಚಾನಲ್ಸ್ ದಿನವೂ ಹೊಸಯುಗದೆಡೆಗೆ ಇಡುವ ಮುಂದಿನ ಹೆಜ್ಜೆಯಾಗಿದೆ. ಮನುಕುಲ ಬೆಳಕನ್ನು ಆಯ್ಕೆ ಮಾಡಿಕೊಂಡು ಪ್ರೀತಿಯನ್ನು ಅಭಿವ್ಯಕ್ತ ಪಡಿಸುವುದಕ್ಕೆ ಇದು ಒಂದು ಪರೀಕ್ಷೆಯೇ ಆಗಿದೆ, ಮತ್ತು ಇದೇ ನಮ್ಮ ಭೂಮಿಯ ಭವಿಷ್ಯವೂ ಆಗಿದೆ.

ಪ್ರತಿ ವರ್ಷದಂತೆ, ಈ ವರ್ಷವೂ, ಮುಂಜಾನೆ 6ಗಂಟೆಗೆ ಮಹರ್ಷಿ ಅಮರರವರಿಗೆ ಪ್ರೀತಿ ಮತ್ತು ಚೈತನ್ಯಗಳನ್ನು ಅರ್ಪಿಸುವುದರ ಮೂಲಕ ದಿನವನ್ನು ಪ್ರಾರಂಭಿಸಿದೆವು. ವಾತಾವರಣದಲ್ಲಿ ಗಾಢವಾದ ನಿಶ್ಶಬ್ದತೆ ತುಂಬಿತ್ತು. ಅಷ್ಟೇ ಅಲ್ಲ, ಗಿಡ–ಮರ, ಆಕಾಶ, ಪಕ್ಷಿಗಳು, ಸರೋವರಗಳು, ರಸ್ತೆಗಳು ಪ್ರತಿಯೊಂದೂ ಪರಿಪೂರ್ಣತೆಯಿಂದ ಈ ದಿನಕ್ಕೆ ಶ್ರುತಿಗೊಂಡಿದ್ದವೇನೋ ಅನ್ನುವ ಹಾಗೆ ಗೋಚರಿಸುತ್ತಿತ್ತು. ಅಮರರವರ 100ನೇ ವರ್ಷದ ಹುಟ್ಟು ಹಬ್ಬದ ಪ್ರಯುಕ್ತ, ಅಮರರವರಿಗೆ ಕಾಣಿಕೆ ನೀಡಲು ವಿಶ್ವವೂ ಸಹ ತನ್ನ ಕೈಗಳನ್ನು ಚಾಚಿದೆ ಎಂಬ ಭಾವನೆ ನನ್ನಲ್ಲಿ ಮೂಡಿತ್ತು. ಮುಂಜಾನೆ 7.15ಕ್ಕೆ ಮೊದಲ ಲೈಟ್ ಚಾನಲ್ ಪ್ರಾರಂಭವಾಗಿ, ಸಂಜೆಯವರೆಗೂ ಸೆಷನ್‌ಗಳು ನಡೆದವು. ಬೆಂಗಳೂರು, ತುಮಕೂರು, ಕೌಜಲಗಿ, ಮಧುರೈ, ವಿಶಾಖ ಪಟ್ಟಣ, ನೆಲ್ಲೂರ್, ಚೆನ್ನೈ ಮತ್ತು ಹೈದರಾಬಾದ್ ನಗರಗಳಲ್ಲಿ ಲೈಟ್ ಚಾನಲಿಂಗ್ ಸೆಷನ್‌ಗಳು ನಡೆದ ಬಗ್ಗೆ ವರದಿಗಳು ಬರುತ್ತಿದ್ದವು. ಪಶ್ಚಿಮ ಭಾರತದ ಮುಂಬೈ, ಪುಣೆ, ಸಾಂಗ್ಲಿ, ಸೋಲಾಪುರ್, ಅಮರಾವತಿ ಮತ್ತು ಮಹರಾಷ್ಟ್ರದ ಇತರ ಭಾಗಗಳಲ್ಲಿಯೂ ಲೈಟ್ ಚಾನಲಿಂಗ್ ಸೆಷನ್‌ಗಳು ನಡೆದವು. ನಮ್ಮ ಕಾರ್ಯಕರ್ತರು ಉತ್ತರ ಭಾರತದ ದೆಹಲಿ, ರಾಜಸ್ಥಾನ, ಮತ್ತು ಉತ್ತರ ಪ್ರದೇಶದಲ್ಲಿ ಅನೇಕ ಲೈಟ್ ಚಾನಲಿಂಗ್ ಸೆಷನ್‌ಗಳನ್ನು ನಡೆಸಿಕೊಟ್ಟರು. ಆ ದಿನ ಹತ್ತು ಲಕ್ಷಕ್ಕೂ ಮೀರಿ ಮಕ್ಕಳು ಮತ್ತು ದೊಡ್ಡವರು ಸೇರಿ ಲೈಟ್ ಚಾನಲಿಂಗ್ ಮಾಡಿದ್ದಾರೆ. ಈ ಮಹಾನ್ ಕಾರ್ಯಕ್ರಮದಲ್ಲಿ ಸುಮಾರು 2400ಶಾಲೆಗಳು ಭಾಗವಹಿಸಿದ್ದವು. ಈ ಲೈಟ್ ಚಾನಲಿಂಗ್ ಕಾರ್ಯಕ್ರಮ, ಮಹರ್ಷಿ ಅಮರರವರ 100ನೇ ವರ್ಷದ ಜನ್ಮ ದಿನದಂದು ನಾವು ಅವರಿಗೆ ಅರ್ಪಿಸಿದ ಅಪೂರ್ವ ಕೊಡುಗೆ ಎಂದು ನಾನು ಭಾವಿಸುತ್ತೇನೆ. ಎಲ್ಲ ದಿಕ್ಕಿನಲ್ಲೂ ಆನಂದ ಮತ್ತು ಸಂತೋಷ ತುಂಬಿತ್ತು.

9ನೇ ವರ್ಷದ ವಿಶ್ವ ಚಾನಲ್ಸ್ ದಿನದಂದು ನಮ್ಮ ಕಾರ್ಯಕರ್ತರಲ್ಲಿ ಅಭೂತಪೂರ್ವ ಉತ್ಸಾಹ ಮತ್ತು ರೋಮಾಂಚನ ಕಾಣಿಸುತ್ತಿತ್ತು. ಎಲ್ಲರೂ ಮುಂಚಿತವಾಗಿ 'ಈ ದಿನಕ್ಕಾಗಿ' ವಿಶೇಷ ರೀತಿಯಲ್ಲಿ ಸಿದ್ಧಗೊಂಡಿದ್ದರು. ಅನೇಕ ಕಾರ್ಯಕರ್ತರ ತಂಡಗಳು ಲೈಟ್ ಚಾನಲಿಂಗ್ ಸೆಷನ್ ಕಾರ್ಯಕ್ರಮಗಳ ಯೋಜನೆಯನ್ನು ಕೆಲವು ತಿಂಗಳುಗಳ ಮುಂಚಿತವಾಗಿ ಸಿದ್ಧಮಾಡಿಟ್ಟು ಕೊಂಡಿದ್ದರು. ಯೋಜನೆ ಪ್ರಕಾರ ಪರಿಪೂರ್ಣತೆಯ ಹಂತ ಮುಟ್ಟಲೂ ಅವರು ಶ್ರಮ ವಹಿಸಿ ಕೆಲಸ ಮಾಡಿದರು. ತಮ್ಮ ಗುರಿಯನ್ನು ಮುಟ್ಟಲು ಸರ್ವ ಪ್ರಯತ್ನ ಮಾಡಿದರು. ಪರ್ವತವನ್ನು ಮೀರುವಂತಹ ದೃಢ ನಿಶ್ಚಯ ಅವರದಾಗಿತ್ತು. ಅವರ ಸಂಕಲ್ಪ ಶಕ್ತಿ ಮತ್ತು ಋಷಿಗಳ ಅನುಗ್ರಹ ಅವರ ಎಲ್ಲ ಅಡಚಣೆಗಳನ್ನು ನಿವಾರಿಸಿದವು. ಇದರ ಜೊತೆಗೆ ಒಂದೇ ತಂಡವಾಗಿ ಕೆಲಸ ಮಾಡಬೇಕೆನ್ನುವ ನಮ್ಮ ಕಾರ್ಯಕರ್ತರ ಪ್ರೀತಿ ಮತ್ತು ಬಾಂಧವ್ಯ, ಕೆಲಸದ ಮೇಲೆ ತನ್ನ ಪ್ರಭಾವ ಬೀರಿತ್ತು.

ನಮ್ಮ ಕಾರ್ಯಕರ್ತರು ಸಾವಿರಾರು ಶಾಲೆಗಳನ್ನು ಮುಖತಃ ಭೇಟಿ ಮಾಡಿ, ವಿಶ್ವ ಚಾನಲ್ಸ್ ದಿನದಲ್ಲಿ ಪಾಲುಗೊಳ್ಳುವಂತೆ ಕೇಳಿಕೊಂಡರು. ಆಶ್ಚರ್ಯವೆಂಬಂತೆ, ಶಾಲೆಗಳೂ ಸಹ ಅಷ್ಟೇ ಉತ್ಸಾಹದಿಂದ ಸ್ಪಂದಿಸಿದರು. ಅವರು ನಮ್ಮ ಕಾರ್ಯಕರ್ತರನ್ನು ಸ್ವಾಗತಿಸುತ್ತಾ, ತಾವೇ ಲೈಟ್ ಚಾನಲಿಂಗ್ ಸೆಷನ್‌ಗಳನ್ನು ನಡೆಸುವುದರ ಮೂಲಕ ಭಾಗವಹಿಸುತ್ತೇವೆ ಎಂದು ಭರವಸೆ ನೀಡಿದರು. ವಿಶ್ವ ಚಾನಲ್ಸ್ ದಿನ ಅನೇಕ ಶಾಲೆಗಳು ಲೈಟ್ ಚಾನಲಿಂಗ್ ಸೆಷನ್‌ಗಳಲ್ಲಿ ಭಾಗವಹಿಸಿದ್ದರ ಬಗ್ಗೆ ಸಂದೇಶಗಳ ಮೂಲಕ, ಮತ್ತು ವಾಟ್ಸ್‌ಪ್ ಫೋಟೋಗಳ ಮೂಲಕ ದೃಢಪಡಿಸಿದರು. ಚನ್ನೈ ನಗರದಲ್ಲಿ ಮುಷ್ಕರ ಇದ್ದರೂ, ಕೆಲವು ಶಾಲೆಗಳಲ್ಲಿ ಲೈಟ್ ಚಾನಲಿಂಗ್ ಸೆಷನ್‌ಗಳು ನಡೆದವು. ಮುಂಬಯಿಯಲ್ಲಿ ಶಾಲೆಯ ಸಂಯೋಜಕರ ಸಹಾಯದಿಂದ ಸರ್ಕಾರದ ಅನುದಾನರಹಿತ 198 ಶಾಲೆಗಳು ಸಹ ಲೈಟ್ ಚಾನಲಿಂಗ್ ದಿನ ಭಾಗವಹಿಸಿದವು. ನಮ್ಮ ಈ ಕೆಲಸದಲ್ಲಿ ತೊಡಗಿಸಿಕೊಂಡು ಭಾಗವಹಿಸಿದ ಶಾಲೆಗಳಿಗೆ ಮತ್ತು ಸಂಸ್ಥೆಗಳ ಅಧಿಕಾರಿಗಳಿಗೆ ಮತ್ತು ಇತರೆ ಲೈಟ್ ಚಾನಲ್‌ಗಳಿಗೆ ನಾವು ಕೃತಜ್ಞರಾಗಿದ್ದೇವೆ. ಅವರ ಪ್ರೀತಿ ಮತ್ತು ಬೆಂಬಲ ನಮಗೆ ಅಗಾಧ ಸಂತೋಷ ತಂದಿದೆ.

ಚಾನಲಿಂಗ್ ಸೆಷನ್‌ಗಳಲ್ಲಿ ಮಕ್ಕಳ ಸಂಖ್ಯೆಯ ಜೊತೆಗೆ ಚಾನಲಿಂಗ್ ಮಾಡಬೇಕೆನ್ನುವ ತೀವ್ರತೆ ಪ್ರಪಂಚದ ಮೇಲೆ ಪ್ರಭಾವ ಬೀರುತ್ತದೆಂದು ನಾನು ಯಾವಾಗಲೂ ನಂಬುತ್ತೇನೆ. ಎಲ್ಲಕ್ಕಿಂತ ಮಿಗಿಲಾಗಿ, ನಮ್ಮ ಸೂಕ್ಷ್ಮ ಲೋಕದ ಮಾಸ್ಟರ್‌ಗಳು ಎಲ್ಲವನ್ನು ನೋಡಿಕೊಳ್ಳುತ್ತಾರೆ. 9ನೇ ವರ್ಲ್ಡ್ ಚಾನಲಿಂಗ್ ದಿನದ ನಂತರವೂ ಜಗತ್ತು ಇದ್ದ ಹಾಗೇ ಇರುವಂತೆ ತೋರಬಹುದು. ಆದರೆ ಇಂತಹ ದೊಡ್ಡ ಚಾನಲಿಂಗ್ ಮತ್ತು ಮಹಾನ್ ಮಾಸ್ಟರ್‌ಗಳ ಉಪಸ್ಥಿತಿ ಎಷ್ಟೋ ಜನರ ಕಣ್ಣೀರನ್ನು, ನೋವನ್ನು ನಿವಾರಿಸಿರಬಹುದು. ಪ್ರಪಂಚದ ಕ್ಲಿಷ್ಟಕರ ಸಮಸ್ಯೆಗಳನ್ನು ಅಳಿಸಿಹಾಕಿರಬಹುದು.

ಇಂಥ ಸುಂದರವಾದ ಕೆಲಸವನ್ನು ಮುಂದುವರೆಸೋಣ. ಮತ್ತು ನಮ್ಮ ಮಹರ್ಷಿ ಅಮರರವರ ಕನಸನ್ನು ನನಸು ಮಾಡೋಣ.■

## ಲೈಟ್ ಚಾನಲ್ಸ್
### ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

## ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡುವುದು.

# ಗುರೂಜಿಯವರ ನುಡಿಗಳು

**ಸಂ: ಶೋಭಾ ಕೆ. ರಾವ್; ಅನು: ಸುಧಾಕರ್**

ನವಂಬರ್ 2005 (ಮುಂದುವರಿದ ಭಾಗ)

ನಮ್ಮಲ್ಲಿರುವ ಆಳವಾದ ಬುದ್ಧಿಶಕ್ತಿಯನ್ನು ವಿವರಿಸುವುದಕ್ಕಾಗಿ 'ಆಧ್ಯಾತ್ಮಿಕ ಬುದ್ಧಿಶಕ್ತಿ' ಎಂಬ ಪದವನ್ನು ಬಹಳ ಹಿಂದೆ ನಾನು ಬಳಸಿದ್ದೆ. ಇದರ ಒಂದು ಉದಾಹರಣೆಯನ್ನು ಕೊಡುತ್ತೇನೆ. ಕೆಲವು ದಿನಗಳ ಹಿಂದೆ ಬಹಳ ವಯಸ್ಸಾದ ಮತ್ತು ಬಹಳ ವಿದ್ಯಾವಂತ ವ್ಯಕ್ತಿಯೊಬ್ಬರಿಂದ ನಮಗೆ ಕರೆ ಬಂದಿತ್ತು. ಅವರು ಕೇಳಿದರು, 'ನನ್ನ ಹೆಂಡತಿ ತೀರಿಕೊಂಡರು. ನಾನು ಧ್ಯಾನವನ್ನು ಮುಂದುವರೆಸಬೇಕೆ?' ಅವರಲ್ಲಿ ಆಧ್ಯಾತ್ಮಿಕ ಬುದ್ಧಿಶಕ್ತಿ ಇಲ್ಲದ್ದರಿಂದ ಅವರು ಇಂತಹ ಪ್ರಶ್ನೆಯನ್ನು ಕೇಳಿದ್ದರು. ವಯಸ್ಸು ಅಥವ ವಿದ್ಯೆ ಈ ಆಧ್ಯಾತ್ಮಿಕ ಬುದ್ಧಿಶಕ್ತಿಯನ್ನು ತಂದುಕೊಡುವುದಿಲ್ಲ. ಒಬ್ಬ ಸಾಮಾನ್ಯ ಯುವಕ ಕೂಡ ಈ ಆಧ್ಯಾತ್ಮಿಕ ಬುದ್ಧಿಶಕ್ತಿಯನ್ನು ಹೊಂದಿರಬಹುದು. ನಾವು ಏಕೆ ಧ್ಯಾನ ಮಾಡುತ್ತೇವೆ? ಶಾಂತಿಯನ್ನು ಪಡೆಯುವುದಕ್ಕಾಗಿ, ದೇವರೆಡೆಗೆ ಮತ್ತು ಮುಕ್ತಿಯೆಡೆಗೆ ಸಾಗುವುದಕ್ಕಾಗಿ ನಾವು ಧ್ಯಾನ ಮಾಡುತ್ತೇವೆ. ಅದು ಪತ್ನಿಗೆ ಅಥವ ಬೇರಾವುದಕ್ಕೂ ಸಂಬಂಧಿಸಿದ್ದಲ್ಲ, ಅದು ನಮ್ಮ ಮತ್ತು ದೇವರ ನಡುವಿನ ಸಂಬಂಧ ಮಾತ್ರ. ವಿಷಯಗಳನ್ನು ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳಲು ಆಧ್ಯಾತ್ಮಿಕ ಬುದ್ಧಿಶಕ್ತಿ ಸಹಾಯ ಮಾಡುತ್ತದೆ.

ಜನರಿಗೆ ಅದ್ಭುತ ಅನುಭವಗಳಾಗುತ್ತವೆ. ಅಂತಹ ಅನುಭವಗಳಾದಾಗ ಅವರು ಉದ್ರೇಕಗೊಳ್ಳುತ್ತಾರೆ ಮತ್ತು ಅದನ್ನು ಬೇರೆಯವರೊಂದಿಗೆ ಹಂಚಿಕೊಳ್ಳಲು ಇಷ್ಟಪಡುತ್ತಾರೆ. ಅದು ಸಹಜ. ನಾನು ಯಾವಾಗಲೂ ಈ ಪ್ರಶ್ನೆಯನ್ನು ಕೇಳುತ್ತೇನೆ ಇದಾದನಂತರ ಏನು, ಈ ದರ್ಶನದ ನಂತರ ಏನು, ಈ ಅನುಭವದ ನಂತರ ಏನು? ಈ ಅನುಭವದ ಬಗ್ಗೆ ಮರೆಯುತ್ತೇವೆ ಮತ್ತು ನಮ್ಮ ಎಂದಿನ ಸಾಮಾನ್ಯ ಬದುಕನ್ನೇ ಮುಂದುವರಿಸುತ್ತೇವೆ. ಸತ್ಯವೆಂದರೆ ಪ್ರತಿಯೊಂದು ಅನುಭವವೂ ನಮ್ಮನ್ನು ಉನ್ನತಗೊಳಿಸುತ್ತದೆ, ನಮ್ಮ ಆಲೋಚನೆಗಳನ್ನು ಮತ್ತು ಭಾವನೆಗಳನ್ನು ವಿಸ್ತಾರಗೊಳಿಸುತ್ತದೆ. ಈ ವಿಸ್ತಾರಗೊಂಡ ಅನುಭವ ಮುಂದುವರೆಯಲು ನಾವು ಅವಕಾಶ ಮಾಡಿಕೊಡಬೇಕು. ಆದರೆ ನಾವು ಅವಕಾಶ ಮಾಡಿಕೊಡುವುದಿಲ್ಲ. ನಾವು ಸಂತೋಷಪಡುತ್ತೇವೆ ನಂತರ ಅದನ್ನು ಮರೆತುಬಿಡುತ್ತೇವೆ, ಆಗ ಆ ಪ್ರಕ್ರಿಯೆ ಕೊನೆಗೊಳ್ಳುತ್ತದೆ. ಯಾವುದೇ ಅನುಭವವಿರಲಿ ಅದು ನಮ್ಮ ವಿಸ್ತಾರತೆಯನ್ನು ಮತ್ತಷ್ಟು ಹಿಗ್ಗಿಸುತ್ತದೆ. ಈ ವಿಸ್ತಾರತೆಗೆ ನಾವು ಪ್ರಜ್ಞಾಪೂರ್ವಕವಾಗಿ ಅವಕಾಶ ಮಾಡಿಕೊಡಬೇಕು. ನಿಮಗಾದ ಅನುಭವದ ಬಗ್ಗೆ ಹಲವಾರು ದಿನಗಳವರೆಗೆ ಯೋಚಿಸುತ್ತಲೇ ಇರಿ ಆಗ ವಿಸ್ತಾರತೆಯನ್ನು ಕಾಣುವಿರಿ, ಆ ವಿಸ್ತಾರತೆಯ ಸೊಬಗನ್ನು ಸವಿಯುವಿರಿ.

ಸೂಕ್ಷ್ಮ ಮಟ್ಟದಲ್ಲಿ ಪಡೆದ ಸೂಚನೆಗಳನ್ನು ಅನುಸರಿಸುವುದರ ಬಗ್ಗೆ ಈ ಹಿಂದೆ ಹಲವಾರು ಬಾರಿ ಎಚ್ಚರಿಕೆಯನ್ನು ನೀಡಿದ್ದೇನೆ. ನೀವು ಋಷಿಗಳನ್ನು ಸಂಪರ್ಕಿಸಿ ಪ್ರಶ್ನೆ ಕೇಳಿದಾಗ ಉತ್ತರವನ್ನು ಪಡೆಯುತ್ತೀರಿ. ಅದು ಒಳ್ಳೆಯದು, ಆದರೆ ನೀವು ಸೂಚನೆಗಳನ್ನು ಪಡೆದಾಗ ನನ್ನೊಂದಿಗೆ ಅದನ್ನು ಪರೀಕ್ಷಿಸಿಕೊಳ್ಳಿ. ನೀವು ಸೂಕ್ಷ್ಮಮಟ್ಟದಲ್ಲಿ ನನ್ನಿಂದ, "ಧ್ಯಾನ ಮಾಡಬೇಡಿ, ಅದರ ಅವಶ್ಯಕತೆಯಿಲ್ಲ," ಎಂಬ ರೀತಿಯ ಸೂಚನೆಯನ್ನು ಪಡೆದಿರಬಹುದು. ಇಂತಹ ಸೂಚನೆಯೊಂದನ್ನು ಪಡೆದಾಗ, ಅದು ನನ್ನಿಂದ ಅಲ್ಲ ಎಂದು ಅರ್ಥ ಮಾಡಿಕೊಳ್ಳಿ. ಅದು ಬೇರೊಬ್ಬ ವ್ಯಕ್ತಿಯಿಂದಲೂ ಇರದಿರಬಹುದು, ಅದು ನಿಮ್ಮ ಮನಸ್ಸೇ ಆಗಿರಬಹುದು. ನಮಗೆ ಧ್ಯಾನ ಮಾಡಲು ಇಷ್ಟವಿಲ್ಲದಿದ್ದರೆ, ನಮ್ಮ ಮನಸ್ಸು ಗುರುವಿನ ಆಕಾರವನ್ನು ಪಡೆದು, "ಧ್ಯಾನ ಮಾಡಬೇಡ" ಎಂದು ಹೇಳುತ್ತದೆ! ನಾನಿದನ್ನು ಹಾಸ್ಯದೊಂದಿಗೆ ಹೇಳುತ್ತಿರಬಹುದು, ನಾನು ವಾಸ್ತವದಲ್ಲಿ ಹೇಳಲು ಪ್ರಯತ್ನಿಸುತ್ತಿರುವುದೇನೆಂದರೆ, ನಿಮಗೆ ಸೂಕ್ಷ್ಮ ಮಟ್ಟದಿಂದ ಬಂದ ಸೂಚನೆಗಳನ್ನು ಕಣ್ಣುಮುಚ್ಚಿಕೊಂಡು ಅನುಸರಿಸಬೇಡಿ. ನಾವು ಸೂಕ್ಷ್ಮ ಮಟ್ಟದಲ್ಲಿ ಬೇರೆ ಸೂಚನೆಗಳನ್ನು ಪಡೆಯಬಹುದು, ಉದಾಹರಣೆಗೆ "ನಿಯಮಿತವಾಗಿ ಧ್ಯಾನಮಾಡಿ" ಅದನ್ನು ನಾವು ಪಾಲಿಸುವುದಿಲ್ಲ! ಕೆಲವು ಅನುಕೂಲಕರ ಸೂಚನೆಗಳು ಬಂದಾಗ ಮಾತ್ರವೇ ನಾವದನ್ನು ಅನುಸರಿಸುತ್ತೇವೆ, ಉದಾಹರಣೆಗೆ "ಧ್ಯಾನ ಮಾಡಬೇಡಿ, ಅದರ ಅವಶ್ಯಕತೆಯಿಲ್ಲ." ಇವುಗಳನ್ನು ನನ್ನೊಂದಿಗೆ ಪರೀಕ್ಷಿಸಿಕೊಳ್ಳಿ, ಪ್ರಶ್ನೆಗಳನ್ನು ಕೇಳುವುದರಿಂದ ಗುರುವಿಗೆ ಅಥವ ನಿಮ್ಮ ಮಾರ್ಗದರ್ಶಿಗೆ ನೀವು ಹೊರೆಯಾಗುತ್ತೀರೆಂದು ಭಾವಿಸಬೇಡಿ. ನನ್ನ ಮುಂದಿಟ್ಟ ಅಥವ ಇಮೇಲ್‌ಗಳಲ್ಲಿ ಕಳಿಸಿದ ಪ್ರಶ್ನೆಗಳಿಗೆ ನಾನು ಉತ್ತರಿಸದಿರುವ ಸಂದರ್ಭ ಒಂದೂ ಇಲ್ಲ. ಪ್ರತಿಯೊಂದು ಪತ್ರ, ಪ್ರತಿಯೊಂದು ಇಮೇಲ್‌ಗೂ ನಾನು ಉತ್ತರಿಸಿದ್ದೇನೆ. ಇದು ನನ್ನ ಕೆಲಸ, ಉತ್ತರ ನೀಡುವುದು ನನಗೆ ಸಂತೋಷ ತರುತ್ತದೆ. ಹಾಗೂ ಬಹು ಮುಖ್ಯವಾದ ವಿಷಯವೆಂದರೆ ಸರಿಯಾದ ರೀತಿಯಲ್ಲಿ ನಿಮ್ಮನ್ನು ಸರಿಯಾದ ಮಾರ್ಗದಲ್ಲಿ ಕರೆದೊಯ್ಯುವುದು. ಆದ್ದರಿಂದ ಯಾವಾಗಲೂ ನನ್ನೊಂದಿಗೆ ಪರೀಕ್ಷಿಸಿಕೊಳ್ಳಿ.

4–12–2005

ನಾನು ನಮ್ಮ ಶಿಕ್ಷಕರೊಬ್ಬರೊಂದಿಗೆ ಇನ್ನೂ ಹೆಚ್ಚು ಕೇಂದ್ರಗಳನ್ನು ತೆರೆಯುವ ಬಗ್ಗೆ, ಹೆಚ್ಚು ಶಿಕ್ಷಕರನ್ನು ಹೊಂದುವ ಬಗ್ಗೆ ಮತ್ತು ಸ್ಯಾಟಲೈಟ್ ಮೂಲಕ ತರಗತಿಗಳನ್ನು ನಡೆಸುವ ಬಗ್ಗೆಯೂ ಮಾತನಾಡುತ್ತಿದ್ದೆ. ಇವೆಲ್ಲ ವಿಚಾರಗಳನ್ನು ಕೇಳಿಸಿಕೊಳ್ಳುತ್ತೇನೆ ಮತ್ತು ಇವೆಲ್ಲಕ್ಕೂ ಋಷಿಗಳು ಎಂದಿಗೆ ಅವಕಾಶಕೊಡುತ್ತಾರೆಂದು ಆಶ್ಚರ್ಯ ಪಡುತ್ತೇನೆ. ಮಾರನೆಯ ದಿನ ನಾನು ಬೆಂಗಳೂರಿಗೆ ಪ್ರಯಾಣಿಸುತ್ತಿದ್ದೆ. ಪ್ರಯಾಣ ಮಾಡುವಾಗ ಮಾಡಲು ಕೆಲಸವನ್ನೂ ತಂದಿರುತ್ತೇನೆ, ಋಷಿಗಳೂ ಜೊತೆಯಲ್ಲಿರುತ್ತಾರೆ. ಅವರು ನನಗೆ ಹೇಳಿದರು, ಅಮರರವರು ದಿನವೊಂದರಲ್ಲಿ ಡಜನ್ ಪವಾಡಗಳನ್ನು ಮಾಡಬಹುದಿತ್ತು; ಮಿಲಿಯಾಂತರ ಜನರನ್ನು ಅವರು ಸೇರಿಸಬಹುದಿತ್ತು; ಪ್ರಪಂಚದಾದ್ಯಂತ ನೂರಾರು ಕೇಂದ್ರಗಳನ್ನು ತೆರೆಯಬಹುದಿತ್ತು. ಅವರಿಗೆ ಅಷ್ಟೊಂದು ಜ್ಞಾನವಿತ್ತು, ಶಕ್ತಿಯಿತ್ತು ಮತ್ತು ಮಾನವ ಮಟ್ಟದಲ್ಲಿ ಸಂಪನ್ಮೂಲಗಳೂ ಇದ್ದವು. ಎಷ್ಟೇ ಆದರೂ ಅವರೊಬ್ಬ ಅರಸರಲ್ಲವೆ. ಆದರೆ ಅಮರರವರು ಸುಮ್ಮನಿದ್ದರು. ಅವರು ಕೇವಲ ಕೆಲವು ನೂರರಷ್ಟು ಜನರನ್ನು ಭೇಟಿಯಾದರು, ನಾನು ಅವರನ್ನು ಭೇಟಿಯಾದಾಗ 30–40 ಜನರಷ್ಟೇ ಇದ್ದರು. ನಂತರದಲ್ಲಿ ಸುಮಾರು 1700 ಜನರಿದ್ದೆವು. ಹಿಂದೆ ಸುಮಾರು 5000 ಜನರನ್ನು ತಾವು ಭೇಟಿಯಾಗಿದ್ದುದಾಗಿಯೂ ಮತ್ತು ಅವರು ಮುಕ್ತಿಯನ್ನು ಪಡೆದುದಾಗಿಯೂ ಅವರೊಮ್ಮೆ ನಮಗೆ ಹೇಳಿದ್ದರು. ಅಮರರವರ ಮುಖಾಂತರ 5000 ಜನರು ಮುಕ್ತಿಯನ್ನು ಪಡೆದುದನ್ನು ಊಹಿಸಿಕೊಳ್ಳಿ!! ಆದರೆ ಜನರಿಗೆ ಇದಾವುದೂ ತಿಳಿದಿರಲಿಲ್ಲ. ಚಿಕ್ಕಗುಬ್ಬಿಯ ಬಗ್ಗೆ ಯಾರಿಗೂ ತಿಳಿದಿಲ್ಲ. ಇದು ಸಹಜ. ಅಮರರವರ ಬಗ್ಗೆಯೂ ಯಾರಿಗೂ ತಿಳಿದಿರಲಿಲ್ಲ. ಶಂಬಲದಲ್ಲಿನ ಜನರು ಬಹಳ ಮುಂದುವರಿದಿದ್ದಾರೆಂದೂ ಋಷಿಗಳು ಹೇಳಿದರು. ಅವರು ಆಕಾಶನೌಕೆಯಲ್ಲಿಯೇ ಸಂಚರಿಸುತ್ತಾರೆ; ಅವರು ಅನಂತಕಾಲದವರೆಗೆ ಬದುಕುತ್ತಾರೆ; ಅವರು ಅತ್ಯಂತ ಮುಂದುವರಿದ ಸಂಪರ್ಕ ಸಾಧನಗಳ ಮೂಲಕ ಪ್ರತಿಯೊಬ್ಬರನ್ನೂ ಸಂಪರ್ಕಿಸಬಲ್ಲರು. ಆದರೆ ಶಂಬಲವು ಪ್ರಪಂಚದ ಮಟ್ಟಿಗೆ ಇನ್ನೂ ಮುಚ್ಚಿಕೊಂಡಿದೆ. ಭಗವಾನ್ ಕಲ್ಕಿ 1924ರಲ್ಲಿ ಜನಿಸಿದರೆಂದು ಅವರು ಮುಂದುವರಿದು ಹೇಳಿದರು. ಅವರು ಇನ್ನೂ ಶಂಬಲದಲ್ಲಿಯೇ ಇದ್ದಾರೆ. ಅವರಿನ್ನೂ ಜನತೆಗೆ ದರ್ಶನ ನೀಡಿಲ್ಲ, ಅದನ್ನು ಬಹಳ ವರ್ಷಗಳಿಂದ ನಾವು ನಿರೀಕ್ಷಿಸುತ್ತಿದ್ದೇವೆ. 'ಏಕೆ?' ಎಂಬ ಪ್ರಶ್ನೆಯನ್ನು ಈ ಮೂರೂ ವಿಷಯಗಳು ನಮ್ಮ ಮುಂದಿಡುತ್ತವೆ. 'ಅದಕ್ಕೆ ಕಾರಣಗಳಿವೆ' ಎಂದು ಅವರು ಹೇಳಿದರು. ಅದಕ್ಕೆ ಸರಿಯಾದ ಕಾಲ ಯಾವುದೆಂದು ಋಷಿಗಳಿಗೆ ಮಾತ್ರವೇ ತಿಳಿದಿದೆ. ನಾನು ಗುಡಿಸಿಲೊಂದನ್ನು ಕಟ್ಟಿದಾಗಲೇ ಈ ಕೇಂದ್ರಕ್ಕೆ ಸುಮಾರು 60 ವರ್ಷಗಳ ಚರಿತ್ರೆ ಇತ್ತು. 60–70 ವರ್ಷಗಳಿಂದ ದೊಡ್ಡದೊಂದು ಕೆಲಸಕ್ಕಾಗಿ ಇಲ್ಲಿ ಸಿದ್ಧತೆ ನಡೆಯುತ್ತಿತ್ತು. ಶಂಬಲ ಕಾಯುತ್ತಿದೆ, ಭಗವಾನ್ ಕಲ್ಕಿ ಕಾಯುತ್ತಿದ್ದಾರೆ. ನಾವು ಇಂತಹ ಅನೇಕ ವಿಷಯಗಳಿಗಾಗಿ ಕಾಯಬೇಕು. 'ಇವೆಲ್ಲವನ್ನೂ ತಿಳಿದುಕೊಂಡು ನಾವೆಲ್ಲರೂ ಬೆಳೆಯಬೇಕು, ಕಾಯಬೇಕು' ಎಂದು ಋಷಿಗಳು ಹೇಳಿದರು. ಇದಕ್ಕೆ ಅಪಾರವಾದ ಗಾಢ ನಂಬಿಕೆ ಬೇಕಾಗುತ್ತದೆ. ನಾವು ವಿಸ್ತರಿಸುವ, ಹರಡುವ ಆಸೆಗೆ ಒಳಗಾಗುವುದು ಬೇಡ. ಹರಡುವ ಸಮಯ ಬಂದಾಗ, ಅದಾಗಿಯೇ ಆಗುತ್ತದೆ. ಬಹಳ ಸಮಯದವರೆಗೆ ಬೆಳಕನ್ನು ಹಿಡಿದಿಡಲು ಆಗುವುದಿಲ್ಲ. ಸೂರ್ಯ ಉದಯಿಸಿದಾಗ ಅದು ಎಲ್ಲರಿಗೂ ಗೊತ್ತಾಗುತ್ತದೆ. ಸಮಯ ಬಂದಾಗ ಇದು ನಡೆಯುತ್ತದೆ. ಅಲ್ಲಿಯವರೆಗೆ, ಸರಿಯಾಗಿ ಅರ್ಥಮಾಡಿಕೊಳ್ಳಲು ಮತ್ತು ಮಹಾನ್ ಕೆಲಸಕ್ಕೆ ಸಿದ್ಧರಾಗಲು ನಾವು ವೈಯಕ್ತಿಕವಾಗಿ ಬೆಳೆಯುವುದು ನಮ್ಮ ಬಹು ದೊಡ್ಡ ಜವಾಬ್ದಾರಿ. ■

# ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

13–01–2019

ನೆನ್ನೆಯಷ್ಟೇ ಹೊಸ ವರ್ಷ ಆರಂಭ ವಾಯಿತೇನೋ ಅನ್ನಿಸುವಂತಿದೆಯಾದರೂ ಈಗಾಗಲೇ ನಾವು ಈ ವರ್ಷದ 13ನೇ ದಿನದಲ್ಲಿದ್ದೇವೆ. ಸಮಯ ಬಹಳ ವೇಗವಾಗಿ ಚಲಿಸುತ್ತಿದೆಯೆಂದು ನಮಗೆಲ್ಲರಿಗೂ ತಿಳಿದಿದೆ. ಪ್ರತಿ ಹೊಸ ವರ್ಷವೂ ಹೊಸ ಚೈತನ್ಯಗಳನ್ನು, ಹೊಸ ಅವಕಾಶಗಳನ್ನು ಮತ್ತು ಪ್ರಪಂಚಕ್ಕೆ ಮತ್ತು ವ್ಯಕ್ತಿಗಳಿಗೆ ಉತ್ತಮ ಭವಿಷ್ಯದ ಸಾಧ್ಯತೆಗಳನ್ನು ತರುತ್ತದೆ. ಹೇಗಿದ್ದರೂ ಪ್ರಪಂಚವನ್ನು ರೂಪಿಸುವವರು ವ್ಯಕ್ತಿಗಳೇ. ಪ್ರಪಂಚವೆಂದರೆ ಅದು ಜನರ ಬಗ್ಗೆಯೇ. ಜನರು ಶಾಂತಿಯನ್ನು ಸೃಷ್ಟಿಸುತ್ತಾರೆ ಅಥವ ಅಸಂತೋಷ ಮತ್ತು ಗೊಂದಲವನ್ನು ಸೃಷ್ಟಿಸುತ್ತಾರೆ.

ನನ್ನ ಸುತ್ತಲಿನ ಬದುಕನ್ನು ನೋಡಿದಾಗ ಅನೇಕ ಸಕಾರಾತ್ಮಕ ವಿಷಯಗಳನ್ನು ನಾನು ಕಾಣುತ್ತೇನೆ. ಬಹಳಷ್ಟು ಒಳ್ಳೆಯತನವನ್ನು ಕಾಣುತ್ತೇನೆ ಮತ್ತು ಸಹಜವಾಗಿಯೇ ಅದಕ್ಕೆ ವಿರುದ್ಧವಾದುದೂ ಇದೆ. ಆ ವಾಸ್ತವವನ್ನು ಕೂಡಾ ನಾವು ಒಪ್ಪಿಕೊಳ್ಳಬೇಕು. ಆದರೆ ಒಳ್ಳೆಯತನವಿಲ್ಲದಿದ್ದರೆ ಈ ಸಂಸ್ಥೆಯನ್ನು ನಡೆಸಲಾಗುವುದಿಲ್ಲ. ನಾವು ಹೊಸಯುಗದ ವ್ಯಕ್ತಿಗಳಂತೆ ಬದುಕಬೇಕು. ನಮ್ಮಿಂದ ನಿರೀಕ್ಷಿಸುವುದು ಇದನ್ನೇ. ನಾವು ಪರಿಪೂರ್ಣರಲ್ಲ. ನಾವು ಬೆಳೆಯಬೇಕಾದ ಮಟ್ಟಗಳು ಅನೇಕವಿವೆ, ನಾವು ಕ್ರಮಿಸಬೇಕಾದ ದೂರ ಬಹಳವಿದೆ. ಆದರೆ ಹೊಸಯುಗಕ್ಕೆ ನಿರೀಕ್ಷಿಸುವ ಒಳ್ಳೆಯತನದ ಮಟ್ಟವನ್ನು ನಮ್ಮ ಸುತ್ತಲಿನ ಪ್ರಪಂಚವು ತಲುಪದಿರುವಾಗ ಪ್ರತಿಬಾರಿಯೂ ಒಳ್ಳೆಯತನವನ್ನು ತೋರುವುದು ನಮಗೆ ಸವಾಲಾಗಿ ಪರಿಣಮಿಸುತ್ತದೆ. ಖಂಡಿತವಾಗಿಯೂ ನಾವು ಒಳ್ಳೆಯತನವನ್ನೇ ಆಚರಿಸಬೇಕು. ಆದರೆ ಕೆಲವೊಮ್ಮೆ ನಮ್ಮ ಒಳ್ಳೆಯತನವು ಶೋಷಣೆಗೊಳಗಾದಾಗ ಸಂದಿಗ್ಧತೆಗೆ ಸಿಲುಕುತ್ತೇವೆ. ನಾವು ಕೆಲವೊಮ್ಮೆ ಕಠಿಣವಾಗಿರಬೇಕಾಗುತ್ತದೆ. ನಮ್ಮ ಆತ್ಮಗೌರವ ಮತ್ತು ಘನತೆಯನ್ನು ಕಾಪಾಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ಅಷ್ಟರ ಮಟ್ಟಿಗೆ ನಮ್ಮ ಪ್ರತಿಕ್ರಿಯೆ ಎಲ್ಲ ಸಮಯದಲ್ಲೂ ಒಳ್ಳೆಯದಾಗಿ ಮತ್ತು ಮೃದುವಾಗಿ ಇರುವುದಿಲ್ಲ. ಒಳ್ಳೆಯವರಾಗಿರುವುದೆಂದರೆ ನಮ್ಮನ್ನು ಶೋಷಣೆಗೆ ಒಳಪಡಿಸಲು ಅವಕಾಶ ಕೊಡುವುದಲ್ಲ. ದುಷ್ಟತೆ, ದುಷ್ಟ ಚೈತನ್ಯಗಳನ್ನು ಎದುರಿಸಬೇಕಾದಾಗ, ದುಷ್ಟತೆ ಮತ್ತು ದುಷ್ಟ ಚೈತನ್ಯಗಳಿಗೆ ಪ್ರತಿಕ್ರಿಯೆಯಾಗಿ ನಕಾರಾತ್ಮಕ ಆಲೋಚನೆಗಳು ಮತ್ತು ಭಾವನೆಗಳು ನಮ್ಮಲ್ಲಿ ಮೂಡುವುದನ್ನು ತಡೆಯಲು ಬೆಳಕಿನಲ್ಲಿ ಸದಾಕಾಲ ಸ್ಥಾಪಿತರಾಗಿರುವುದು ನಮಗಿರುವ ಸವಾಲು.

ನಾನೊಂದು ಸರಳ ಉದಾಹರಣೆಯನ್ನು ಕೊಡುತ್ತೇನೆ. ಮನಸ್ಸಿಗೆ ನೋವಾಗುವುದನ್ನು ಈ ಪ್ರಪಂಚದಲ್ಲಿ ತಪ್ಪಿಸಲು ಸಾಧ್ಯವಿಲ್ಲ ಏಕೆಂದರೆ ಇದು ಅಪರಿಪೂರ್ಣ ಪ್ರಪಂಚ. ನಮಗೆ ಯಾರಾದರೂ ನೋವುಂಟುಮಾಡಿದರೆ ನಮ್ಮೊಳಗೆ ಏನಾಗುತ್ತದೆನ್ನುವುದು ಮುಖ್ಯ. ನಮ್ಮೊಳಗೆ ಭಾವನಾತ್ಮಕವಾಗಿ ಏನಾಗುತ್ತದೆ, ನಮ್ಮೊಳಗೆ ಅಲೋಚನೆಯ ಮಟ್ಟದಲ್ಲಿ ಏನಾಗುತ್ತದೆನ್ನುವುದು ಮುಖ್ಯ. ನಕಾರಾತ್ಮಕ ಆಲೋಚನೆಗಳು, ನಕಾರಾತ್ಮಕ ಪ್ರತಿಕ್ರಿಯೆಗಳು ನಮ್ಮೊಳಗೆ ಬಹುಕಾಲ ನಿಲ್ಲಲು ನಾವು ಅವಕಾಶಮಾಡಿಕೊಟ್ಟರೆ, ನಮಗೇ ತಿಳಿಯದಂತೆ ನಾವು ಕೂಡ ದುಷ್ಟತೆಗೆ ಚಾನಲ್ ಆಗುತ್ತೇವೆ. ಆ ರೀತಿ ಆದರೆ ನಮ್ಮನ್ನು ಗೊಂದಲಕ್ಕೊಳಪಡಿಸುವ, ನಮ್ಮನ್ನು ಅದರ ಚಾನಲ್ ಆಗಿ ಮಾಡಿಕೊಳ್ಳುವ ತನ್ನ ಗುರಿಯನ್ನು ದುಷ್ಟ ಚೈತನ್ಯಗಳು ಸಾಧಿಸಿದಂತಾಗುತ್ತದೆ. ಅದೇ ಅವುಗಳ ಕೆಲಸ. ಇದರ ಬಗ್ಗೆ ನಾನು ಸಾಕಷ್ಟು ಯೋಚಿಸಿದ್ದೇನೆ, ಪ್ರತಿಬಾರಿಯೂ, ನಾವು ಆಧ್ಯಾತ್ಮಿಕವಾಗಿ ಸದೃಢರಾಗಿ ಬೆಳೆಯಬೇಕೆಂಬ ತೀರ್ಮಾನಕ್ಕೆ ಬಂದಿದ್ದೇನೆ. ಬೇರೆ ದಾರಿಯಿಲ್ಲ. ಬಹುಶಃ ನಾವು ಹೆಚ್ಚು ಧ್ಯಾನಮಾಡಬೇಕು, ಹೆಚ್ಚು ಸಕಾರಾತ್ಮಕತೆ ಹೊಂದಬೇಕು, ಹೆಚ್ಚು ಬೆಳಕನ್ನು ಹೊಂದಿರಬೇಕು. ನಮ್ಮ ಮೇಲೆ ನೋವು ಮತ್ತು ಅಪಮಾನದ ದಾಳಿಯಾದಾಗ, ಪ್ರಜ್ಞಾಪೂರ್ವಕವಾಗಿ ನಮ್ಮೊಳಗೆ ಇನ್ನೂ ಹೆಚ್ಚು ಬೆಳಕನ್ನು ತುಂಬಿಕೊಳ್ಳಬೇಕು. ಹಾಗೆ ಮಾಡಿದಾಗ ಪ್ರಜ್ಞಾಪೂರ್ವಕವಾಗಿ ನಾವು ಪರಿಶುದ್ಧತೆಯನ್ನು ಆಯ್ದುಕೊಳ್ಳುತ್ತೇವೆ, ಹಾಗೂ ಪ್ರಜ್ಞಾಪೂರ್ವಕವಾಗಿ ದುಷ್ಟತೆಯನ್ನು ತಿರಸ್ಕರಿಸುತ್ತೇವೆ ಕೂಡ. ನಮ್ಮ ಉದ್ದೇಶವನ್ನು ಬಲಗೊಳಿಸುತ್ತೇವೆ ಮತ್ತು ಅದನ್ನು ವಿಶ್ವಕ್ಕೆ ಘೋಷಿಸುತ್ತೇವೆ. ನಂತರ ವಿಶ್ವವು ಪ್ರತಿಸ್ಪಂದಿಸುತ್ತದೆ ಮತ್ತು ಅನೇಕ ರೀತಿಯಲ್ಲಿ ನಮಗೆ ಸಹಾಯ ಮಾಡುತ್ತದೆ. ಅದು ದುಷ್ಟ ಚೈತನ್ಯಗಳನ್ನು, ನಕಾರಾತ್ಮಕ ಆಲೋಚನೆಗಳು ಮತ್ತು ಭಾವನೆಗಳನ್ನು ಬದಲಾಯಿಸಿಕೊಳ್ಳಲು ಸಹಾಯ ಮಾಡುತ್ತದೆ. ಇರುವ ಒಂದೇ ದಾರಿಯೆಂದರೆ ಆಧ್ಯಾತ್ಮಿಕವಾಗಿ ಸದೃಢರಾಗುವುದು ಮಾತ್ರ. ನಾವು ಆಧ್ಯಾತ್ಮಿಕವಾಗಿ ಸದೃಢರಾಗಿದ್ದಾಗ ಎಲ್ಲ ಸಕಾರಾತ್ಮಕತೆಯ ಮೂಲವಾದ ದೇವರೊಂದಿಗೆ ಸದಾಕಾಲ ಸಂಪರ್ಕದಲ್ಲಿರುತ್ತೇವೆ. ಆಗ ನಮ್ಮ ಮೇಲೆ ಯಾವುದು ಕೂಡ ನಕಾರಾತ್ಮಕ ಪರಿಣಾಮ ಬೀರಲಾರದು.

ಪ್ರಪಂಚ ಒಂದು ಮಟ್ಟದ ಅರಿವಿನಲ್ಲಿದ್ದಾಗ, ನಾವು ಉನ್ನತ ಮಟ್ಟದ ಅರಿವಿನಲ್ಲಿ ಬದುಕುವುದು ಕಷ್ಟ. ಅದೇ ನಮಗಿರುವ ಸವಾಲು. ಹಾಗೆ ನೋಡಿದರೆ ಅದೇ ನಮ್ಮ ಕೆಲಸ. ಅದನ್ನೇ ನಾವು ಆರಿಸಿಕೊಂಡಿರುವುದು. ಅಲ್ಲದಿದ್ದರೆ ನಾವಿಲ್ಲೇಕೆ ಸೇರುತ್ತಿದ್ದೆವು? ಮಾಸ್ಟರ್‌ಗಳು ಯಾವುದೇ ಸಮಯದಲ್ಲೂ ಉನ್ನತ ಮಟ್ಟದಲ್ಲಿ ಬದುಕುತ್ತಾರೆ. ಅವರು ಮಾದರಿಯಾಗಿದ್ದಾರೆ ಮತ್ತು ನಾವು ಅವರ ಹೆಜ್ಜೆಯನ್ನೇ ಅನುಸರಿಸುವುದನ್ನು ಆಯ್ದುಕೊಂಡಿದ್ದೇವೆ. ನಾವು ಮಾರ್ಗದರ್ಶಿ ಬೆಳಕಾಗಬಹುದು. ಅದು, ಈ ಸವಾಲಿನ ದಿನಗಳಲ್ಲಿ ನಮಗಿರುವ ಅವಕಾಶ. ಎಲ್ಲ ಉಪಕರಣಗಳು, ಸಾಧನಗಳು, ಜ್ಞಾನ ಮತ್ತು ಚೈತನ್ಯಗಳು ನಮಗಿವೆ. ಪ್ರಪಂಚದ ಬಗ್ಗೆ ನಾವು ದೂರುವ ಹಾಗಿಲ್ಲ. ಪ್ರಪಂಚವನ್ನು ನಾವು ಒಪ್ಪಿಕೊಳ್ಳಬೇಕು ಮತ್ತು ಈ ಪ್ರಪಂಚವನ್ನು ಮುನ್ನಡೆಸುವ ಜವಾಬ್ದಾರಿಯನ್ನು ನಾವು ತೆಗೆದುಕೊಂಡಿದ್ದೇವೆ. ಇವೆಲ್ಲ ದೊಡ್ಡ ಮಾತುಗಳಾಯಿತೆಂದು ನನಗೆ ತಿಳಿದಿದೆ. ಆದರೆ ಗುರೂಜಿಯವರು ನಮಗೆ ಹೇಳುತ್ತಿದ್ದುದನ್ನೇ ನಾನು ಮತ್ತೆ ಹೇಳುತ್ತಿದ್ದೇನೆ. ನಾವು ಹುಟ್ಟುವುದಕ್ಕೆ ಮೊದಲೇ ಈ ಪ್ರಪಂಚ ಹೀಗಿದೆಯೆಂದು ನಮಗೆ ತಿಳಿದಿತ್ತು, ಇಲ್ಲಿಗೆ ಬರುವುದನ್ನು ನಾವು ಪ್ರಜ್ಞಾಪೂರ್ವಕವಾಗಿಯೇ ಆಯ್ದುಕೊಂಡೆವು. ಈ ಕೆಲಸದಲ್ಲಿ ತೊಡಗಿಕೊಂಡಿರುವ ಕಾರ್ಯಕರ್ತರ ಬಗ್ಗೆ ಮಾತ್ರವೇ ನಾನು ಹೇಳುತ್ತಿಲ್ಲ. ಆದರೆ ನಮ್ಮೆಲ್ಲರ ಬಗ್ಗೆಯೂ ಹೇಳುತ್ತಿದ್ದೇನೆ. ನಾವು ಭಾಷಣ ಮಾಡುವ ಮೂಲಕ ಮುನ್ನಡೆಸಲಾರೆವು ಆದರೆ ಗುರೂಜಿಯವರು ಕೊಟ್ಟಿರುವ ನಿಯಮಗಳನ್ನು ಅನುಸರಿಸುವ ಮೂಲಕ ಮತ್ತು ನಿಜವಾಗಿಯೂ ಅದರಂತೆಯೇ ಬದುಕುವುದರ ಮೂಲಕ ನಾವು ಮುನ್ನಡೆಸಬಹುದು. ನಾವು ಹಾಗೆ ಮಾಡಿದರೆ, ಋಷಿಗಳು ನಮ್ಮ ಮೂಲಕ ಇನ್ನೂ ಹೆಚ್ಚು ಕೆಲಸ ಮಾಡಿಸುತ್ತಾರೆ; ಏಕೆಂದರೆ ಅದ್ಭುತ ಚೈತನ್ಯಗಳನ್ನು ಪ್ರಪಂಚದಾದ್ಯಂತ ಹರಡಲು ನಾವು ಅವರ ಚಾನಲ್ ಆಗುತ್ತೇವೆ. ಮೌನವಾಗಿ ಮಾಡಬಹುದಾದ ಕೆಲಸವನ್ನು ಊಹಿಸಿಕೊಳ್ಳಿ. ಬಹುಶಃ ಪ್ರಪಂಚಕ್ಕೆ ಎಂದಿಗೂ ನಮ್ಮ ಕಾಣಿಕೆ ಗೊತ್ತಾಗದಿರಬಹುದು, ಅದರ ಅವಶ್ಯಕತೆ ನಮಗಿಲ್ಲ. ಅದು ವಿಶ್ವಕ್ಕೆ ತಿಳಿಯುತ್ತದೆ. ದೇವರಿಗೆ ತಿಳಿಯುತ್ತದೆ. ಋಷಿಗಳಿಗೆ ತಿಳಿಯುತ್ತದೆ. ನಮಗೆ ಅಷ್ಟೊಂದು ದೊಡ್ಡ ಜವಾಬ್ದಾರಿಯಿದೆ.

ಈಗಿನ ತೀವ್ರ ಪ್ರಳಯದ ಸಮಯಗಳಲ್ಲಿ ಸವಾಲುಗಳಿರುತ್ತವೆ ಮತ್ತು ಸಹಾಯವೂ ಇರುತ್ತದೆ. ಕೃಪೆ ಇರುತ್ತದೆ. ಹೊಸ ಯುಗದೊಳಕ್ಕೆ ಇನ್ನೂ ಹೆಚ್ಚು ಸಾಗಲು ನಾವು ಬಹು ಮುಖ್ಯ ಮೈಲುಗಲ್ಲನ್ನು ದಾಟಿದ್ದೇವೆಂದು ನಾನು ಭಾವಿಸುತ್ತೇನೆ. ಅದು ಒಂದು ರೀತಿಯ ಅನಿಸಿಕೆ ಅಷ್ಟೆ, ಅದನ್ನು ಸಾಬೀತು ಪಡಿಸಲು ಆಗುವುದಿಲ್ಲ. ನಮ್ಮ ಪ್ರಗತಿಯನ್ನು ಮುಂದಿನ ದಿನಗಳಷ್ಟೇ ಹೊರಗೆಡಹುತ್ತದೆ. 2012 ರಿಂದ 2018 ರವರೆಗಿನ ಅವಧಿಯ ಬಗ್ಗೆ ಗುರೂಜಿಯವರು ಮಾತನಾಡಿದ್ದರಿಂದಾಗಿ ಈ ನಂಬಿಕೆ ಬಂದಿದೆ. ನಾವೀಗ 2018ನ್ನು ದಾಟಿದ್ದೇವೆ. ಮೈಲಿಗಲ್ಲೊಂದನ್ನು ದಾಟಿದ್ದೇವೆ. ಪ್ರಳಯ ಪ್ರಕ್ರಿಯೆಗಳು ತೀವ್ರಗೊಳ್ಳುವುದು ಮುಂದುವರೆಯುವುದನ್ನು ನಾವು ಕಾಣುತ್ತೇವೆ. ನಾವು ಪ್ರಜ್ಞಾಪೂರ್ವಕವಾಗಿ ತಪ್ಪಾದವುಗಳನ್ನು ಆಯ್ಕೆ ಮಾಡಿಕೊಂಡಾಗ ಪ್ರಳಯವು ನಮ್ಮನ್ನು ತಿದ್ದುತ್ತದೆ. ಆ ತಿದ್ದುವ ಕೆಲಸ ಕಾರುಣ್ಯದಿಂದಿರಲು ಸಾಧ್ಯವಿಲ್ಲ. ಅದರ ತೀವ್ರತೆಯಂತೂ ಇನ್ನು ಮುಂದೆ ಹೆಚ್ಚಾಗುತ್ತದೆ. ಆದರೆ ನಾವು ಭಯಪಡಬೇಕಾಗಿಲ್ಲ. ಮಾಸ್ಟರ್‌ಗಳ ವಿವೇಕ ಮತ್ತು ಸಹಾಯ ನಮಗಿವೆ.■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರು – ವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲೀಷ್‌ನಲ್ಲಿ (ವರ್ಷಕ್ಕೆ ರೂ. 2500), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1300) ಪಾಠಗಳನ್ನು ಕಳುಹಿಸಲಾಗುವುದು. ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ವಾರ್ಷಿಕ ರಿಜಿಸ್ಟ್ರೇಶನ್ ಫ಼ೀಯು ರೂ. 4500. ಈ ಫ಼ೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಮತ್ತು ಪಠ್ಯಪುಸ್ತಕಗಳು ಸೇರಿದೆ.

ನಂತರ, ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫ಼ೀ ಇಂಗ್ಲೀಷ್ (ವರ್ಷಕ್ಕೆ ರೂ. 2000), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 900). ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫ಼ೀಯು ರೂ. 3500. ಈ ಫ಼ೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಸೇರಿದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು 'Manasa Light Age Foundation' ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿ ಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಮಾಸ್ಟರ್ ಜೊತೆಗಿನ ಪಯಣ

ಗುರೂಜಿ ಕೃಷ್ಣಾನಂದ; ಅನು: ಸುಧಾಕರ್

('ಮಾನಸ ಪತ್ರ'ದ ಆಗಸ್ಟ್ ಮತ್ತು ಸೆಪ್ಟೆಂಬರ್ 1989ರ ಸಂಚಿಕೆಯಿಂದ)

ಅದು ಫೆಬ್ರವರಿ 1977, ತಂಪಾದ ಮತ್ತು ಪ್ರಶಾಂತವಾದ ಸಂಜೆ.

ಅದ್ಭುತ ಸೂರ್ಯಾಸ್ತಮವು ಕಟ್ಟಡಗಳ ಕಾಡಿನ ಹಿಂದೆ ಮರೆಯಾಗಿ ನಿಂತು, ಯಾವಾಗಲೂ ತಲೆಯೆತ್ತಿ ನೋಡದ ಮತ್ತು ಆಕಾಶವನ್ನು ಮರೆತಿರುವ ಜನರನ್ನು ಗಮನಿಸದೆ, ತನ್ನ ವರ್ಣಗಳನ್ನು ಅಕಾಶದಲ್ಲಿ ಹರಡಿತ್ತು. ಯಾರೂ ಓದದ, ಕೇಳದ, ನೋಡದ ವಿಶೇಷ ಸಂದೇಶ ಆ ಸಂಜೆಯಲ್ಲಿತ್ತು! ನಿಗೂಢತೆ ಯಾವಾಗಲೂ ಅತ್ಯಾಕರ್ಷಕ.

ನನ್ನ ಸ್ನೇಹಿತರೊಬ್ಬರೊಂದಿಗೆ ಉಪನಗರವೊಂದರ ಮನೆಯೊಳಕ್ಕೆ ಹೋದೆ. ಮನೆ ಕೆಲಸದಾಕೆ ನಮ್ಮನ್ನು ಸುಂದರವಾದ ಪೀಠೋಪಕರಣಗಳಿದ್ದ ಮನೆಯ ದಿವಾನಖಾನೆಗೆ ಕರೆದೊಯ್ದು ಸದ್ದಿಲ್ಲದೆ ಹಿಂದೆ ಸರಿದಳು. ನಾವು ಪರಿಪೂರ್ಣ ಮೌನದಲ್ಲಿ ಕಾಯುತ್ತಿರುವಂತೆ, ಆ ಮೌನದ ಮೂಲಕ ವರ್ಣಚಿತ್ರಗಳು, ರತ್ನಗಂಬಳಿ, ಹೂಜಿ, ಸಣ್ಣ ಕಲಾಕೃತಿಗಳು, ಕೇಳದ ಪಿಸುಮಾತಿನಲ್ಲಿ ಮಾತನಾಡಲಾರಂಭಿಸಿದವು. ಕಟ್ಟುಹಾಕಿದ ಭಾವಚಿತ್ರಗಳು, ಗಾಢವಾಗಿ ಬಣ್ಣಬಳಿದ ದೇವರ ವಿಗ್ರಹಗಳಿಲ್ಲದಿರುವುದು ನನಗೆ ಆಶ್ಚರ್ಯವನ್ನುಂಟುಮಾಡಿತು. ನನ್ನ ಸ್ನೇಹಿತನೆಡೆಗೆ ನೋಡಿದಾಗ ಅವನು ರಹಸ್ಯವನ್ನು ಆನಂದಿಸುತ್ತಾ ನಸುನಕ್ಕ.

ನನ್ನ ಸ್ನೇಹಿತನು, ಕಣ್ಣಿಗೆ ಕಾಣದ ಋಷಿಗಳ ಸಂಪರ್ಕದಲ್ಲಿದ್ದಾರೆಂದು ವರ್ಣಿಸಿದ್ದ ವ್ಯಕ್ತಿಯನ್ನು ಭೇಟಿಮಾಡಲು ನಾವಿಲ್ಲಿಗೆ ಬಂದಿದ್ದೆವು. ಈಗಾಗಲೇ ನನ್ನ ಸ್ನೇಹಿತ ಅವರನ್ನು ಭೇಟಿಯಾಗಿದ್ದನು ಮತ್ತು ಅವರಿಂದ ಧ್ಯಾನಕ್ಕೆ ದೀಕ್ಷೆ ಪಡೆದಿದ್ದನು. ಧ್ಯಾನದ ಬಗ್ಗೆಯೂ ಮತ್ತು ಆ ವ್ಯಕ್ತಿಯ ಬಗ್ಗೆಯೂ ನನಗೆ ಆಸಕ್ತಿಯಿತ್ತು. ಬಾಗಿಲಿನ ಪರದೆಯನ್ನು ಸರಿಸಿ ಎತ್ತರವಾದ ವ್ಯಕ್ತಿಯೊಬ್ಬರು ಹೊರಬಂದರು. ಗಾಂಭೀರ್ಯ ಮತ್ತು ನಗುವಿನೊಂದಿಗೆ ನಮ್ಮನ್ನವರು ಸ್ವಾಗತಿಸಿದರು. ಅವರು ಕೈಜೋಡಿಸಿ ನಮಸ್ಕರಿಸಿದ್ದು ಅವರ ಆಧುನಿಕ ಉಡಿಗೆಯಾದ ಪ್ಯಾಂಟ್ ಮತ್ತು ಶರ್ಟ್‌ಗೆ ಹೊಂದುತ್ತಿರಲಿಲ್ಲ. ಅವರು ನಮ್ಮ ಮುಂದೆ ಕುಳಿತು ದೃಷ್ಟಿಸಿ ನೋಡಿದರು. ಧಾರ್ಮಿಕ ವ್ಯಕ್ತಿಯೊಬ್ಬರನ್ನು ಭೇಟಿಯಾಗಲು ಕಾತುರನಾಗಿದ್ದ ನಾನು ತೆಳು ಕೂದಲಿನ, ಕನ್ನಡಕಧಾರಿ ಮತ್ತು ತೂಕವಾಗಿದ್ದ ಆ ವ್ಯಕ್ತಿಯೆಡೆಗೆ ಹೆಚ್ಚು ಗಮನ ಹರಿಸದೆ ನಿಶ್ಚಲವಾಗಿದ್ದ ಬಾಗಿಲಿನ ಪರದೆಯ ಕಡೆಗೆ ನನ್ನ ದೃಷ್ಟಿ ಬೀರಿದೆ.

ಆಗ ನನ್ನ ಸ್ನೇಹಿತ ಅಮರರವರನ್ನು ನನಗೆ ಪರಿಚಯಿಸಿದ.

ಅಮರ! ಆ ವ್ಯಕ್ತಿ! ಋಷಿಗಳ ಸಂಪರ್ಕದಲ್ಲಿರುವವರು! ಕಾವಿ ಬಟ್ಟೆಯಿಲ್ಲ, ಪವಿತ್ರ ಮಣಿಗಳಿಲ್ಲ... ಗುರುಗಳ ಗತ್ತಿಲ್ಲ! ಅವರು ಮುಗುಳ್ನಗುತ್ತಿರುವುದನ್ನು ಆಶ್ಚರ್ಯದಿಂದ ನೋಡುತ್ತಿದ್ದಾಗ ನನ್ನ ಕಣ್ಣು ತೆರೆಯಿತು, ಪರಿಚಯದ ಕ್ಷೀಣ ಕಿರಣವೊಂದು ಹೊರಹೊಮ್ಮಿತು. ಅವರನ್ನೆಲ್ಲಿ ನೋಡಿದ್ದೇನೆ! ... ನೆನಪಿಸಿಕೊಳ್ಳಲು ಕಷ್ಟಪಡುತ್ತಿದ್ದೆ. ಆಗ ಅವರು ಹೇಳಿದರು.

"ಹೌದು. ನಾವು ಭೇಟಿಯಾಗಿದ್ದೇವೆ... ಹಿಂದಿನ ಜನ್ಮಗಳಲ್ಲಿ ಅನೇಕ ಬಾರಿ."

ಹಿಂದೆ ನಾವು ಭೇಟಿಯಾಗಿದ್ದುದು ನನಗೆ ಖಚಿತವಾಗಿತ್ತು. ಆದರೆ ಹಿಂದಿನ ಜನ್ಮಗಳಲ್ಲಿ...! ಎಲ್ಲರೂ ಮಾಡಬಹುದಾಗಿದ್ದ ಹಾಗೆಯೇ ನಾನೂ ಅದರ ಬಗ್ಗೆ ನಕ್ಕು ಸುಮ್ಮನಾಗಲು ಬಯಸಿದೆ. ಆದರೆ ಆ ಸರಳ ಪದಗಳ ಹಿಂದೆ, ಆ ಸಮಯದಲ್ಲಿ ನನಗೆ ಸರಿಯಾಗಿ ಅರ್ಥವಾಗದ್ದೇನೋ ಇತ್ತು. ಆ ಮಾತುಗಳನ್ನು ಅವರೇ ಹೇಳಿದ್ದರಿಂದ ಮತ್ತು ಅವರು ಸತ್ಯವನ್ನಲ್ಲದೆ ಬೇರೇನನ್ನೂ ಹೇಳುವುದಿಲ್ಲವೆಂಬ ಅರಿವಿನಲ್ಲಿ ನಾನು ಅವರು ಹೇಳಿದ್ದನ್ನು ಒಪ್ಪಿಕೊಂಡೆ.

"ನಾನು ನಿಮ್ಮನ್ನು ನಿರೀಕ್ಷಿಸಿದ್ದೆ."

ರಾಮಕೃಷ್ಣರು ಇವೇ ಪದಗಳನ್ನು ವಿವೇಕಾನಂದರಿಗೆ ಹೇಳಿದ್ದನ್ನು ನಾನು ಕಲ್ಪಿಸಿಕೊಂಡೆ ಮತ್ತು ನನ್ನನ್ನು ವಿವೇಕಾನಂದರ ಜೊತೆಗೆ ಊಹಿಸಿಕೊಂಡು ಪುಲಕಗೊಂಡೆ. ಅದು ನಾಟಕೀಯವಾಗಿರಲಿಲ್ಲ. ಅತ್ಯಂತ ಸಹಜವಾಗಿ, ಪ್ರಾಮಾಣಿಕವಾಗಿ ಮತ್ತು ಭಾವೋದ್ವೇಗವಿಲ್ಲದೆ ಅವರು ಮಾತನಾಡಿದರು.

"ಸಹಜವಾಗಿಯೇ, ನೀವು ಪುನಃ ಧ್ಯಾನವನ್ನು ಕಲಿಯಬಯಸುತ್ತೀರಿ."

ನಾನು ತಲೆಯಾಡಿಸಿದೆ. ಆದರೆ, ಅವರು "ಪುನಃ" ಎಂದೇಕೆ ಹೇಳಿದರು!

"ನಾವು ಪ್ರತಿಯೊಂದು ಜನ್ಮದಲ್ಲೂ ಕಲಿಯುತ್ತೇವೆ, ಅಭ್ಯಾಸ ಮಾಡುತ್ತೇವೆ. ಸಾಧಿಸುತ್ತೇವೆ ಕೂಡ... ಆದರೆ ನಮ್ಮ ಸಾಧನೆ ಪೂರ್ಣಗೊಳ್ಳುವುದಿಲ್ಲ. ಆದ್ದರಿಂದ..."

ಹೌದು. ನಾನು ಅರ್ಥಮಾಡಿಕೊಳ್ಳಲಾರಂಭಿಸಿದೆ. "ನಿಮ್ಮ ವಿಷಯದಲ್ಲಿ ಅದು ಬೇರೆಯೇ ಆಗಿದೆ."

ನಾನು ಇನ್ನೂ ಹೆಚ್ಚು ತಿಳಿಯಬಯಸಿದೆ, ಆದರೆ ಅವರು ಇದ್ದಕ್ಕಿದ್ದಂತೆ ಮಾತನ್ನು ನಿಲ್ಲಿಸಿ ನನ್ನ ಬದುಕಿನ ಪುಟಗಳನ್ನು ಓದುತ್ತಿದ್ದಾರೇನೋ ಎನ್ನುವಂತೆ ನನ್ನತ್ತ ತಲ್ಲೀನತೆಯಿಂದ ದೃಷ್ಟಿಸಿದರು.

ಅಡಗಿಸಿಟ್ಟ ಭಾವೋದ್ವೇಗದಿಂದ ನನ್ನ ದೇಹ ಬೆಚ್ಚಗಾಯಿತು ಮತ್ತು ನನಗೇ ತಿಳಿಯದ ಭಾವನೆಗಳು ಮೌನವಾಗಿ ಆಳವಾದ ಸಾಗರವನ್ನು ಕದಡುತ್ತಿತ್ತು.

"ದಯವಿಟ್ಟು ನಾಳೆ ಇದೇ ಸಮಯಕ್ಕೆ ಬನ್ನಿ. ಋಷಿಗಳೊಂದಿಗೆ ಭೇಟಿಯನ್ನು ಏರ್ಪಡಿಸುತ್ತೇನೆ."

ನನಗೇನೂ ಅರ್ಥವಾಗಲಿಲ್ಲ, ಅವರು ತಕ್ಷಣದಲ್ಲಿಯೇ ಮುಂದುವರೆಸಿದರು,

"ನೋಡಿ, ಧ್ಯಾನಕ್ಕೆ ದೀಕ್ಷೆ ನೀಡುವುದು ನಾನಲ್ಲ. ಋಷಿಗಳು ನಿಮಗೆ ದೀಕ್ಷೆ ನೀಡುತ್ತಾರೆ. ನಾನು ಒಬ್ಬ ಮಧ್ಯವರ್ತಿಯಾಗಿಯಷ್ಟೇ ಕೆಲಸಮಾಡುತ್ತೇನೆ. ನನ್ನಲ್ಲಿ ಯಾವುದೇ ಶಕ್ತಿಗಳಿಲ್ಲ."

ಅವರು ಎದ್ದುನಿಂತು ನಗುವಿನೊಂದಿಗೆ ಮೌನವಾಗಿ ವಿದಾಯ ಹೇಳಿದರು.

ಹತ್ತಿರದ ಬಸ್ ನಿಲ್ದಾಣಕ್ಕೆ ನಡೆದು ಹೋಗುತ್ತಿರುವಾಗ ನನ್ನ ತಿಳಿವಳಿಕೆ ಮತ್ತು ವ್ಯಕ್ತಿತ್ವವನ್ನು ಒಟ್ಟುಗೂಡಿಸಿಕೊಳ್ಳಲು ಪ್ರಯತ್ನಿಸಿದೆ. ನನ್ನ ಸ್ನೇಹಿತ ಅಮರರವರ ಬಗ್ಗೆ ಹೇಳುತ್ತಿದ್ದ.

ಅಮರರವರು ರಾಜವಂಶದಿಂದ ಬಂದವರು – ಕೌಜಲಗಿಯ ದೇಸಾಯಿಗಳು. ಅವರು ಬೆಂಗಳೂರಿನಲ್ಲಿ ಹುಟ್ಟಿ ಬೆಳೆದವರು. ಮದುವೆಯಾಗಿದ್ದಾರೆ; ಒಬ್ಬಳು ಮಗಳಿದ್ದಾಳೆ...

ಋಷಿಗಳ ಬಗ್ಗೆ ಆಶ್ಚರ್ಯಪಡುತ್ತಾ ಮನೆ ತಲುಪಿದೆ. ವಿಚಿತ್ರ ಕನಸುಗಳಿಂದಾಗಿ ಆ ರಾತ್ರಿ ಹಲವಾರು ಬಾರಿ ಎಚ್ಚರಗೊಂಡೆ.

... (ಮುಂದುವರೆಯುತ್ತದೆ)

# ಪ್ರಶ್ನೋತ್ತರಗಳು

ಸಂ: ಶೋಭಾ ಕೆ. ರಾವ್; ಅನು: ಪಾಂಡುರಂಗ

**ಪ್ರ: ಶಾಶ್ವತವಾದ ನಂಬಿಕೆಗೆ ಒಂದು ಅನುಭವ ಸಾಕಾಗುವುದಿಲ್ಲವೇ?**

ಉ: ಪ್ರಾಮಾಣಿಕ ನಂಬಿಕೆಗೆ ಅನುಭವ ಬೇಕಾಗಿಲ್ಲ. ಎಲ್ಲಿ ಪ್ರೀತಿ ಇರುವುದೋ, ಅಲ್ಲಿ ವಿಶ್ವಾಸ ಮತ್ತು ನಂಬಿಕೆ ಇರುತ್ತದೆ. ಪ್ರೀತಿಯು ಜನರ ಜೊತೆಗೆ, ದೇವರ ಜೊತೆಗೆ ಮತ್ತು ಋಷಿಗಳ ಜೊತೆಗೆ ಒಂದು ರೀತಿಯ ಸಂಪರ್ಕವನ್ನುಂಟುಮಾಡುತ್ತದೆ.

**ಪ್ರ: ಅನುಭವದ ಮೂಲ ಮುಖ್ಯವೇ?**

ಉ: ಇಲ್ಲ. ಅನುಭವ ಮುಖ್ಯವೇ ಹೊರತು, ಅದರ ಮೂಲವಲ್ಲ.

**ಪ್ರ: ನಾವು ಏನನ್ನಾದರೂ ಬಯಸುತ್ತಿದ್ದರೆ ಆಗ ಅದು ಕೂಡಾ ನಮ್ಮನ್ನು ಬಯಸುತ್ತಿರುತ್ತದೆ ಎನ್ನುವುದು ನಿಜವೆ?**

ಉ: ಇದು ಭಾಗಶಃ ಸತ್ಯ. ವಿಶ್ವ ಅಥವಾ ದೇವರು ನಮಗೆ ಅನೇಕ ಕೊಡುಗೆಗಳನ್ನು ಕೊಡುವುದಕ್ಕೆ ಕಾಯುತ್ತಿರುತ್ತದೆ, ಆದರೆ ನಮಗೆ ಇವುಗಳ ಬಗ್ಗೆ ಅರಿವಿರುವುದಿಲ್ಲ. ಕಾರಣ, ಅವುಗಳನ್ನು ಸ್ವೀಕರಿಸುವುದಕ್ಕೆ ನಾವು ಸಿದ್ಧರಿಲ್ಲದಿರಬಹುದು ಅಥವಾ ಬೇರೇನನ್ನೋ ಕೇಳುತ್ತಿರಬಹುದು. ವಿಶ್ವದ ಜೊತೆಗೆ ನಾವು ಪರಸ್ಪರ ಮಾತನಾಡಲು ಪ್ರಾರಂಭಿಸಬೇಕು. ಸಂಪೂರ್ಣ ವಿಶ್ವಾಸವನ್ನು ಹೊಂದಿರಬೇಕು. ಆಗ ನಮ್ಮ ಜೀವನ ಪೂರ್ತಿಯಾಗಿ ಬೇರೆ ರೀತಿಯಲ್ಲಿರುತ್ತದೆ.

**ಪ್ರ: ನಿರಂತರವಾದ ನಿರಾಸೆಗಳನ್ನು ನಿಭಾಯಿಸುವುದು ಹೇಗೆ?**

ಉ: ನಮ್ಮ ದಾರಿಗಳನ್ನು ನಾವೇ ಹುಡುಕಿಕೊಳ್ಳಬೇಕು. ಮೊದಲನೆಯದಾಗಿ ನಾವು ಎಂದೆಂದಿಗೂ ಭರವಸೆಯನ್ನು ಕಳೆದುಕೊಳ್ಳಬಾರದು ಮತ್ತು ನಮ್ಮ ಪ್ರಯತ್ನಗಳನ್ನು ಬೇರೆ ರೀತಿಯಲ್ಲಿ ಸಂಘಟಿಸಿಕೊಳ್ಳಬೇಕು. ಮತ್ತೊಂದು ತಿರುವು ಯಾವಾಗಲೂ ಇರುತ್ತದೆ. ನೀವು ಹಿಂಬಾಲಿಸುತ್ತಿರುವ ಗುರಿಯು, ಆ ಸಮಯಕ್ಕೆ ಸೂಕ್ತವಾಗಿದೆಯೇ ಎಂದು ಪರೀಕ್ಷಿಸಿ ಕೊಳ್ಳಬಹುದು. ನಿಯತವಾಗಿ ಧ್ಯಾನ ಮಾಡಿ, ನಿಮಗೆ ಮಾರ್ಗದರ್ಶನ ಮತ್ತು ಸಹಾಯ ಸಿಗುತ್ತದೆ. ಒಳ್ಳೆಯತನ, ಪ್ರಾಮಾಣಿಕತೆ, ತಾಳ್ಮೆ ಇವುಗಳನ್ನು ಬೆಳೆಸಿಕೊಂಡು ಆಧ್ಯಾತ್ಮಿಕ ವ್ಯಕ್ತಿಗಳಾಗುವುದರ ಮೂಲಕ ವಿಶ್ವದಿಂದ ಸಹಾಯ ಪಡೆಯುವುದನ್ನು ನಾವು ಕಲಿಯಲೇಬೇಕು. ವಿಶ್ವದ ಮೇಲೆ ನಂಬಿಕೆ ಇಡಿ. ಯಾವುದೇ ರೀತಿಯ ತೊಂದರೆಯಿಂದ ನೀವು ಹೊರಬರುವುದನ್ನು ನೋಡುವಿರಿ.

**ಪ್ರ: ಬೇರೆಯವರ ಜೊತೆಗಿನ ನಮ್ಮ ಸಂಬಂಧಗಳನ್ನು ಯಾವ ರೀತಿಯಲ್ಲಿ ವಿವೇಕಯುತವಾಗಿ ನಿಭಾಯಿಸಬಹುದು?**

ಉ: ವಿಶ್ವದ ಬಗ್ಗೆ ಮತ್ತು ಬೇರೆಯವರ ಮೇಲೆ ನೀವು ಪ್ರೀತಿಯನ್ನು ಬೆಳೆಸಿಕೊಂಡಾಗ ಯಾವುದೇ ಸಂಬಂಧವನ್ನು ನಿಭಾಯಿಸಬಹುದು ಎಂದು ನಾನು ನಿಜವಾಗಿಯೂ ನಂಬುತ್ತೇನೆ. ಬೇರೆಯವರ ವಿಷಯಗಳಲ್ಲಿ ತಲೆ ಹಾಕಬೇಡಿ. ಬೇರೆಯವರ ಜೊತೆಗೆ ಮಾತನಾಡುವಾಗ, ಈ ಭೂಮಿಯ ಆಚೆ ಇರುವ ಜೀವನದ ಬಗ್ಗೆ, ಇರುವಿಕೆಯ ಬಗ್ಗೆ ಸ್ವಲ್ಪ ಸಮಯ ನಮ್ಮ ಗಮನವನ್ನು ಹರಿಸಬೇಕು. ಈ ಮಟ್ಟದ ಜೀವನಕ್ಕಿಂತ ಉನ್ನತವಾದದ್ದು ಏನೋ ಒಂದಿದೆ ಎನ್ನುವ ಅರಿವು ನಮ್ಮನ್ನು ವಿಭಿನ್ನರನ್ನಾಗಿ ಮಾಡುತ್ತದೆ ಹಾಗೂ ಈ ಜೀವನ ಸುಂದರವಾಗುತ್ತದೆ.

**ಪ್ರ: ಈ ಭೂಮಿಯ ಮೇಲೆ ಸತ್ಯ ಯುಗವು ಶಾಶ್ವತವಾಗಿರುತ್ತದೆಂದು ನಾನು ಕೇಳಿದ್ದೇನೆ. ಆಗ 51000ವರ್ಷಗಳಿಗೊಮ್ಮೆ ತೆರೆದುಕೊಳ್ಳುವ ಈ ಕೇಂದ್ರಕ್ಕೆ ಏನಾಗುತ್ತದೆ?**

ಉ: ಒಂದು ವೇಳೆ ಆ ರೀತಿಯಾದರೆ, ಆಗ ಈ ಕೇಂದ್ರವನ್ನು ಮುಚ್ಚುತ್ತೇವೆ, ಆದರೆ ಈ ಕೆಲಸ ಮುಂದುವರೆಯುತ್ತದೆ. ಹೊಸ ಯುಗದ ಪರಿವರ್ತನೆಗಾಗಿ ಇಲ್ಲಿ ಕೆಲಸ ಮಾಡುತ್ತಿರುವವರು ಬೇರೆ ಭೂಮಿಗಳಲ್ಲಿ ಕೆಲಸ ಮಾಡುತ್ತಾರೆ. ಈ ಭೂಮಿಯು ಸತ್ಯ ಯುಗದಲ್ಲಿ ಶಾಶ್ವತವಾಗಿರಬೇಕೆ ಅಥವಾ ಬೇಡವೇ ಎನ್ನುವುದು ಇನ್ನೂ ನಿರ್ಧಾರವಾಗಬೇಕಾಗಿದೆ.

**ಪ್ರ: ಭೌತಿಕ ಮಟ್ಟದಲ್ಲಿ ಋಷಿಗಳ ಕೆಲಸ ಮಾಡುತ್ತಿರುವ ಒಬ್ಬ ಧ್ಯಾನಿಯು, ಸೂಕ್ಷ್ಮ ಮಟ್ಟದಲ್ಲಿ ಋಷಿಗಳ ಮಾತುಗಳನ್ನು ಕೇಳದಿರುವುದಕ್ಕೆ ಸಾಧ್ಯವಿದೆಯೇ?**

ಉ: ಹೌದು ಇದು ಸಾಧ್ಯವಿದೆ. ಯಾರು ಋಷಿಗಳ ಮಾತುಗಳನ್ನು ಕೇಳುವುದಿಲ್ಲವೋ, ಅಂತಹವರು ಸಹಜವಾಗಿಯೇ ಇಲ್ಲಿ ಇರುವುದಿಲ್ಲ. ಇದು ಅಪರೂಪಕ್ಕೊಮ್ಮೆ ಆಗುತ್ತದೆ. ಯಾವ ಮಟ್ಟದಲ್ಲಿಯಾದರೂ ಸರಿಯೇ ನಾವು ಋಷಿಗಳ ಮಾತುಗಳನ್ನು ಕೇಳಬೇಕಾಗುತ್ತದೆ ಎನ್ನುವುದು ಸಹಜ.

**ಪ್ರ: ಸೂಕ್ಷ್ಮ ಮಟ್ಟದ ತರಗತಿಗಳಿಗೆ ನಮ್ಮನ್ನು ಆಯ್ಕೆ ಮಾಡಿಕೊಂಡಿದ್ದಾರೆಂದು ನಮಗೆ ಹೇಗೆ ಗೊತ್ತಾಗುತ್ತದೆ?**

ಉ: ನಾವು ಸೂಕ್ಷ್ಮ ಮಟ್ಟದ ತರಗತಿಗಳಿಗೆ ಹಾಜರಾಗಲು ಪ್ರಾರಂಭಿಸಿದಾಗ, ಅದರ ಪರಿಣಾಮ ನಮ್ಮ ಜೀವನದಲ್ಲಿ ಪ್ರತಿಬಿಂಬಿಸುತ್ತದೆ. ಕ್ರಮೇಣವಾಗಿ ಪರಿವರ್ತನೆಯಾಗುತ್ತದೆ. ಇದ್ದಕ್ಕಿದ್ದಂತೆ ಜೀವನ ಬಹಳ ಸುಂದರವಾಗಿ, ಆಸಕ್ತಿದಾಯಕವಾಗುತ್ತದೆ, ಆರೋಗ್ಯ ಸುಧಾರಿಸುತ್ತದೆ, ಸಮಸ್ಯೆಗಳು ಮಾಯವಾಗುತ್ತವೆ. ನಾವು ಗೊಣಗಾಡುವುದನ್ನು, ಆಕ್ಷೇಪಣೆ ಮಾಡುವುದನ್ನು ನಿಲ್ಲಿಸಿಬಿಡುತ್ತೇವೆ. ನಮ್ಮಲ್ಲಿ ಇಂತಹ ಬದಲಾವಣೆಗಳು ಸಂಭವಿಸಿದಾಗ, ನಾವು ಸೂಕ್ಷ್ಮ ಮಟ್ಟದ ತರಗತಿಗಳಿಗೆ ಹಾಜರಾಗುತ್ತಿದ್ದೇವೆಂದು ನಿಸ್ಸಂದೇಹವಾಗಿ ಭಾವಿಸಬಹುದು. ನಮ್ಮ ಅಂತರ್ಬೋಧೆ (intuition) ಕೂಡ ನಾವು ಸೂಕ್ಷ್ಮ ಮಟ್ಟದ ತರಗತಿಗಳಿಗೆ ಹಾಜರಾಗುತ್ತಿದ್ದೇವೆಂದು ನಮಗೆ ಹೇಳುತ್ತದೆ.

**ಪ್ರ: ಪ್ರೀತಿ ಅಪ್ರೀತಿಯನ್ನು ಅಭಿವ್ಯಕ್ತ ಪಡಿಸಲು ಪ್ರಚೋದಿಸುತ್ತದೆಯೇ?**

ಉ: ಇಲ್ಲ. ಪ್ರೀತಿ ಯಾವಾಗಲೂ ಪ್ರೀತಿಯನ್ನೇ ಅಭಿವ್ಯಕ್ತಪಡಿಸಲು ಪ್ರಚೋದಿಸುತ್ತದೆಯೇ ಹೊರತು ಅಪ್ರೀತಿಯನ್ನಲ್ಲ. ■

## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| Light Body & Other Realities | 100/- |
| Master-Pupil Talks | 60/- |
| Master-Pupil Talks - Vol 2 | 75/- |
| iGuruji Vol 1,3,4 & 7 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis-Vol 2 | 150/- |
| Channelled Knowledge from the Rishis-Vol 3 & 4 | each 200/- |
| Guruji Speaks Part - I & II | each 200/- |
| Guruji Speaks (Vol 3) | 150/- |
| Guruji Speaks (Vol 4) | 250/- |
| Guruji Speaks (Vol 5 & 7) | each 200/- |
| The Book of Reflections - Vol 1 & 2 | each 200/- |
| The Book of Reflections - Vol 3 | 150/- |
| Meditators on Meditations | 75/- |
| Meditators on Experiences | 75/- |
| Meditational Experiences - Vol 1 & 2 | each 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis - Vol 1 & 2 | each 100/- |
| Pyramid Revelations | 100/- |
| Thus Spoke Guruji Krishnananda - Vol 1 | 200/- |
| Thus Spoke Guruji Krishnananda - Vol 2 | 250/- |


| | |
|---|---|
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | 100/- |

| | |
|---|---|
| प्रकाशवाट (Marathi) | 150/- |
| आयगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु–शिष्य संवाद (Marathi) | 60/- |

| | |
|---|---|
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| आत्मा का अवतरण (Hindi) | 50/- |

| | |
|---|---|
| தியானம் செய்வது எப்படி | 50/- |
| ஒளியின் வாயில்கள் | 200/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |

| | |
|---|---|
| ధ్యానం చేయ్యడం ఎలా | 50/- |
| కాంతికి ద్వారములు | 100/- |



**ಗುರೂಜಿ ಕೃಷ್ಣಾನಂದ (1939 - 2012)**

## ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

Published: 21st of Every Month. RNI. No. KARKAN/2003/13739 Regd. Postal Regn. No. KARN/BGE/1124/ 2017-2019
Date of posting Newsletter-25th or 27th or 29th of Every Month. Posted at Bangalore PSO, Bg-560026 No. of Pages-8

## ಸಾಧಕರ ಆಧ್ಯಾತ್ಮಿಕ ಅನುಭವಗಳು ಮತ್ತು ಅವರ ಪತ್ರಗಳಿಂದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸ್ವರ್ಣಲತಾ

ನನ್ನ ಎಡಗಣ್ಣಿನ ದೃಷ್ಟಿ ಹಾಳಾಗಿತ್ತು. ಕಣ್ಣಿನ ರೆಟಿನಾಗೆ ತೊಂದರೆಯಾಗಿರುವುದರಿಂದ ವಿರಳವಾದ ನೋವುರಹಿತ ದೃಷ್ಟಿಹೀನತೆ ಉಂಟಾಗಿದೆ ಎಂದು ವೈದ್ಯರು ಗುರುತಿಸಿದರು. ನಾನು ಸೂರ್ಯನಾರಾಯಣ ತಂತ್ರ ಹಾಗೂ "ಬೆಳಕಿನಲ್ಲಿ ಬದುಕುವುದು" ಪುಸ್ತಕದಲ್ಲಿರುವಂತೆ ಹೀಲಿಂಗ್ ತಂತ್ರವನ್ನು ಅಭ್ಯಾಸ ಮಾಡಿದೆ. ಕೆಲವು ದಿನಗಳ ನಂತರ ಮತ್ತೆ ವೈದ್ಯರು ನನ್ನನ್ನು ಪರೀಕ್ಷಿಸಿ ದೃಷ್ಟಿ ಸರಿಹೋಗಿದೆ ಮತ್ತು ಆಗಿರುವ ಗಾಯ ಕೂಡ ಗುಣವಾಗುತ್ತಿದೆ ಎಂದು ತಿಳಿಸಿದರು. ಋಷಿಗಳ ಕರುಣೆಯಿಂದ ಒಂದು ಪವಾಡವೇ ನಡೆದು ಹೋಯಿತು. ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಅವರಿಗೆ ಅರ್ಪಿಸುತ್ತೇನೆ.

–ಸತ್ವಜಯ್ ಥೋಕಲ್

ನಾನು ಶಾಂತಿ ಸಮಾಧಾನಗಳಿಂದಿದ್ದೇನೆ. ನಡೆಯುತ್ತಿರುವ ವಿದ್ಯಮಾನಗಳಿಗೆ ಹೊಂದಿಕೊಳ್ಳುತ್ತೇನೆ. ಈಗ ನನಗೆ ಕೋಪ ಮಾಡಿಕೊಳ್ಳುವುದೇ ಕಷ್ಟವಾಗಿದೆ! ಈ ಮೊದಲು ನಾನು ಕೋಪಗೊಳ್ಳಬಹುದಾಗಿದ್ದ ವಿಷಯಗಳೆಲ್ಲವೂ ಈಗ ತೊಂದರೆ ಕೊಡುವುದೇ ಇಲ್ಲ. ನಾನು ಜೀವನವನ್ನು ನೋಡುವ ರೀತಿಯೇ ಬದಲಾಗಿದೆ. ಚಿಂತೆಗೀಡಾಗುವ ಬದಲು ಅದರೊಂದಿಗೆ ಹೊಂದಿಕೊಳ್ಳುತ್ತೇನೆ.

–ಪ್ರತಿಭಾ ಪಾಟೀಲ್

ನಾನು ನನ್ನ ಕೆಲವು ಸ್ನೇಹಿತರೊಡನೆ ಸಣ್ಣ ಪ್ರವಾಸವೊಂದಕ್ಕೆ ಹೋಗಿದ್ದೆ. ಹೊರಡುವ ಮೊದಲು ಕಾರಿಗೆ ಬೆಳಕನ್ನು ಕಳುಹಿಸಿ ಪ್ರಯಾಣ ಪ್ರಾರಂಭಿಸಿದೆವು. ಅದು ರಾತ್ರಿಯ ಪ್ರಯಾಣವಾಗಿದ್ದು ಅರ್ಧದಾರಿ ಹೋದ ನಂತರ ಕಾರನ್ನು ಚಲಿಸುತ್ತಿದ್ದ ಸ್ನೇಹಿತ ಒಂದು ಕ್ಷಣ ನಿದ್ದೆಗೆ ಜಾರಿ ಕಾರಿನ ಹಿಡಿತ ತಪ್ಪಿತು. ಆಗ ಮುಂದಿನಿಂದ ವೇಗವಾಗಿ ಬರುತ್ತಿದ್ದ ಬಸ್ಸಿಗೆ ನಮ್ಮ ಕಾರು ಡಿಕ್ಕಿ ಹೊಡೆದು ಅಪಘಾತವಾಗಬೇಕಿತ್ತು. ಕೂದಲೆಳೆಯಷ್ಟು ಅಂತರದಲ್ಲಿ ಅದು ತಪ್ಪಿತು. ಇದನ್ನು ತಡೆದದ್ದು ಬೆಳಕೇ ಎಂಬುದು ನನಗೆ ಖಾತ್ರಿಯಾಗಿತ್ತು. ನಮ್ಮನ್ನೆಲ್ಲ ಕಾಪಾಡಿದ ಬೆಳಕು, ಋಷಿಗಳು ಮತ್ತು ಗುರೂಜಿಯವರಿಗೆ ಮನಸಾರೆ ವಂದಿಸಿದೆ.

–ಪೂಜಾ. ಬಿ

ಯಾವಾಗಲೂ ಸಕಾರಾತ್ಮಕವಾಗಿರುವುದು, ನನ್ನ ಸುತ್ತ ಮುತ್ತಲಿನವರೆಲ್ಲರಿಗಾಗಿ ಅಪಾರವಾದ ಪ್ರೀತಿ ಹಾಗೂ ನನ್ನೊಳಗಿನ ಪ್ರಶಾಂತತೆ, ಇವು ನನ್ನಲ್ಲಾಗಿರುವ ಮೂರು ಪ್ರಮುಖ ಬದಲಾವಣೆಗಳು. ಈ ಎಲ್ಲ ಬದಲಾವಣೆಗಳೂ ನನ್ನ ಜೀವನದಲ್ಲಿನ ಏರಿಳಿತಗಳನ್ನು ಸುಲಭವಾಗಿ ನಿರ್ವಹಿಸಲು ನನ್ನನ್ನು ಸಜ್ಜುಗೊಳಿಸಿವೆ. ಈಗ ನನಗೆ ನಿರ್ಮೋಹದ ಅಭ್ಯಾಸ ಇಷ್ಟವಾಗುತ್ತದೆ ಮತ್ತು ಬೇಡವಾದದ್ದನ್ನೆಲ್ಲ ನಿರಾಯಾಸವಾಗಿ ಬಿಟ್ಟುಬಿಡುತ್ತೇನೆ. ವರ್ತಮಾನದಲ್ಲಿ ಬದುಕಿ ಮೌನವನ್ನು ಆನಂದಿಸುವುದು ನನ್ನ ಜೀವನದ ಒಂದು ಭಾಗವಾಗಿದೆ.

–ಪಾಯಲ್ ವರ್ಮ

## ಫಾರಂ 4 (ರೂಲ್ 8)ರಂತೆ

"ತಪೋವಾಣಿ" ಕನ್ನಡ ವಾರ್ತಾಪತ್ರದ ಮಾಲೀಕತ್ವ ಮತ್ತು ಇತರ ವಿವರಗಳು

| | |
|---|---|
| 1. ಪತ್ರಿಕೆಯ ಹೆಸರು | ತಪೋವಾಣಿ |
| 2. ರಿಜಿಸ್ಟ್ರೇಷನ್ ನಂಬರ್ | KARKAN/2003/13739 |
| 3. ಪ್ರಕಟಣೆಯ ಸ್ಥಳ | ಬೆಂಗಳೂರು |
| 4. ಪ್ರಕಟಣೆಯ ಅವಧಿ | ತಿಂಗಳಿಗೊಮ್ಮೆ |
| 5. ಮುದ್ರಕರು, ಪ್ರಕಾಶಕರು ಮತ್ತು ಸಂಪಾದಕರ ಹೆಸರು | ಶ್ಯಾಮಲಾದೇವಿ |
| ರಾಷ್ಟ್ರೀಯತೆ | ಭಾರತೀಯರು |
| ವಿಳಾಸ | ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್– 560077 |
| 6. ಮುದ್ರಣವಾಗುವ ಸ್ಥಳ | ಆರ್ಟ್ ಪ್ರಿಂಟ್, 719/A, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು –560086 |
| 7. ಮಾಲೀಕರ ಹೆಸರು | ಮಾನಸ ಫೌಂಡೇಷನ್(ರಿ) |

ನಾನು, ಶ್ಯಾಮಲಾದೇವಿ, ಈ ಮೂಲಕ ತಿಳಿಸುವುದೇನೆಂದರೆ, ಮೇಲ್ಕಂಡ ವಿವರಗಳು ನನ್ನ ತಿಳಿವಳಿಕೆ, ನನ್ನ ನಂಬಿಕೆ ಪ್ರಕಾರ ಸಂಪೂರ್ಣ ಸತ್ಯವಾಗಿವೆ.

ಸಹಿ
ಶ್ಯಾಮಲಾದೇವಿ
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು

ಬೆಂಗಳೂರು
ತಾ: 25–2–2019

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು–560086. ಫೋನ್: 23359992
ಸಂಪಾದಕರು : ಶ್ಯಾಮಲಾ ದೇವಿ